ಎಂದೇನು ಹೇಳಿದ್ದಾರೋ ಅದನ್ನು ಮಾಡಲ್ ಬಿಲ್ಲಿನಲ್ಲಿ ಸಹ ಹಾಕಿರಲಿಲ್ಲ. ಹಾಗಿರುವಾಗ ಇದರ ಪರಿಣಾಮವೇನೆಂಬುದನ್ನು ಪರಿಶೀಲಿಸಬೇಕು. ಪ್ರತಿ ದಿವಸ ರಿಜಿಸ್ಟ್ರಾರರು ಮತ್ತು ಅವರ ಸಿಬ್ಬಂದಿ ಹಣಕಾಸಿನ ವಿಚಾರ ವಗೈರೆಗಳಲ್ಲಿ ಪ್ರವೇಶಿಸುವುದಕ್ಕೆ ಷುರು ಮಾಡಿದರೆ ಸಾರ್ವಜನಿಕ ಪ್ರತಿನಿಧಿಗಳು ತಾವೇಕೆ ತಮ್ಮ ವೇಳೆ ಮತ್ತು ಉತ್ಸಾಹಗಳನ್ನು ಈ ವಿಚಾರದಲ್ಲಿ ಖರ್ಚುಮಾಡಬೇಕೆಂದು ಕೇಳುತ್ತಾರೆ. ಒಂದೇ ಒಂದು ಉದಾಹರಣೆ. ಫೈನಾನ್ಷಿಯಲ್ ಕಂಟ್ರೋಲ್ ರಿಜಿಸ್ಟ್ರಾರರ ಕೈಲಿದ್ದರೆ ಪ್ರತಿ ಹೆಜ್ಜೆಗೂ ಅವರ ಅನುಮತಿ ಪಡೆಯಬೇಕಾಗುವುದು, ಅವರ ನಿರ್ಬಂಧ ಹೆಚ್ಚಬಹುದು. ಇದು ನನ್ನ ವೈಯಕ್ತಿಕ ಅನುಭವವೆಂದು ಹೇಳಬಯಸುತ್ತೇನೆ. ಇದರಿಂದ ಸಂಸ್ಥೆಯ ಪ್ರಗತಿಗೆ ಅಡ್ಡಿ ಬರುತ್ತದೆ. 1947 ನೆಯ ಇಸವಿಯಲ್ಲಿ ಹುಬ್ಬಳ್ಳಿಯಲ್ಲಿ ಒಂದು ಕೋ-ಆಪರೇಟೀವ್ ಕಾಟನ್ ಸೇಲ್ಸ್ ಸೊಸೈಟಿ ಎಂದಿತ್ತು. ಅದರಲ್ಲಿ ಸಹಕಾರ ಇಲಾಖೆಗೆ ಸಂಬಂಧಪಟ್ಟ ಸರಕಾರಿ ನೌಕರರು ಮ್ಯಾನೇಜರಾಗಿದ್ದರು. ಅಲ್ಲಿ ದುರಾಡಳಿತ ಹೆಚ್ಚಾಗಿತ್ತು. ಹಣ ವಿಶೇಷವಾಗಿ ಒಬ್ಬ ವ್ಯಕ್ತಿಗೆ ಅಲ್ಲಿ ದೊರೆಯುತ್ತಿತ್ತು. ಆಗ ರೈತರಿಗೆ ಸಂಬಂಧಿಸಿದ ವಿಷಯಗಳಲ್ಲಿ ಆಸಕ್ತಿವಹಿಸಿ ಸಣ್ಣ ಸಂಸ್ಥೆಗಳಲ್ಲಿ ದುಡಿಯುತ್ತಿದ್ದ ನನ್ನನ್ನು ಒತ್ತಾಯಮಾಡಿ ಆ ಸೊಸೈಟಿ ಪ್ರತಿನಿಧಿಯನ್ನಾಗಿ ಸೇರಿಸಿದರು. ಅಲ್ಲಿ ಒಬ್ಬ ವ್ಯಕ್ತಿ ಬಡ್ಡಿಯಿಲ್ಲದೆ ಒಂದು ಲಕ್ಷ ರೂಪಾಯಿಗಳ ಕ್ರೆಡಿಟ್ ಉಪಯೋಗ ಮಾಡುತ್ತಿದ್ದ. ಸೊಸೈಟಿಗೆ ಬ್ಯಾಂಕಿನಿಂದ ಒಂದು ಲಕ್ಷ ರೂಪಾಯಿಗಳನ್ನು ಶೇಕಡ ಆರರಂತೆ ಬಡ್ಡಿಗೆ ತಂದು ಹೀಗೆ ದುರುಪಯೋಗ ಮಾಡುತ್ತಿದ್ದರು. ಅಂಥ ಸಂದರ್ಭದಲ್ಲಿ ನಾನು ಮ್ಯಾನೇಜಿಂಗ್ ಕಮಿಟಿಯಲ್ಲಿದ್ದೆ. ಆಗ ಮ್ಯಾನೇಜಿಂಗ್ ಕಮಿಟಿ ಹಣ ಕೊಡಬಾರದೆಂದು ಠರಾವು ಮಾಡಿದರೂ ಕೂಡ ಹಿಂದೆ ದುರುಪಯೋಗಪಡಿಸಿಕೊಂಡಿದ್ದ ವ್ಯಕ್ತಿಗೆ ಕೊಟ್ಟರು. ಅದರಮೇಲೆ ಸರ್ಕಾರಕ್ಕೆ ತಿಳಿಸಿ ಅಲ್ಲಿರುವ ಅಧಿಕಾರಿಯನ್ನು ಬೇರೆ ಕಡೆಗೆ ಹಾಕಿ, ನಾವೇ ಮ್ಯಾನೇಜ್‌ಮೆಂಟ್ ನೋಡಿಕೊಳ್ಳುತ್ತೇವೆ ಎಂದು ಹೇಳಿದೆವು. ಈ ಪ್ರಕಾರ ಆಗಿದೆ. ಕಳೆದ ಹತ್ತು ವರ್ಷಗಳಲ್ಲಿ ನೂರಕ್ಕೆ ಎರಡರಷ್ಟು ಕೂಡ ಉತ್ಪತ್ತಿ ಬರುತ್ತಿರಲಿಲ್ಲ. ಈಗ ಹೆಚ್ಚಾಗಿ ಬರುವಂತೆ ಮಾಡಿ ಆರ್ಥಿಕ ಭದ್ರತೆಯನ್ನುಂಟುಮಾಡಿದ್ದೇವೆ. ಕೆಲವು ವರ್ಷಗಳ ಹಿಂದೆ ಮುನಿಸಿಪಾಲಿಟಿಯು ಮಾರ್ಕೆಟ್ ಯಾರ್ಡ್‌ನಲ್ಲಿ ಪ್ಲಾಟ್‌ಗಳನ್ನು ಮಾಡಿತು. ಸೊಸೈಟಿ ಅಲ್ಲಿ ಜಾಗ ಪಡೆಯಬೇಕಾದರೆ ಹಿಂದಿದ್ದ ಒಬಿರಾಯನ ಕಾಲದ ನಿಯಮದಂತೆ ರಿಜಿಸ್ಟ್ರಾರರ ಪರವಾನಗಿ ಪಡೆಯಬೇಕಾಗಿತ್ತು. ಅದನ್ನು ಪಡೆದು ಜಾಗ ತೆಗೆದುಕೊಳ್ಳಬೇಕಾದರೆ ಎರಡು ವರ್ಷಗಳಾದರೂ ಆಗುತ್ತಿರಲಿಲ್ಲ. ಅಪ್ಲಿಕೇಷನ್ ಅಲ್ಲಿಂದಿಲ್ಲಿಗೆ ಓಡಾಡುವುದರಲ್ಲೇ ಕಾಲಾಹರಣವಾಗುತ್ತದೆ. ರಿಜಿಸ್ಟ್ರಾರರಿಂದ ಪರವಾನಗಿ ಬರುವುದರೊಳಗೆ ಎಲ್ಲಾ ಲಿಲಾವು ಆಗುತ್ತಿತ್ತು. ರಿಜಿಸ್ಟ್ರಾರರ ಪರವಾನಗಿ ತೆಗೆದುಕೊಂಡು ಅನಂತರ ಪ್ರಯತ್ನಿಸಿದರೆ ಮಾರ್ಕೆಟ್ ಪ್ಲಾಟ್ ಸಿಕ್ಕುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈ ದಿವಸ 109 ನೆಯ ಕಲಂ ಪ್ರಕಾರ ನಡೆಸುಕೊಳ್ಳದಿದ್ದರೆ 200 ರೂಪಾಯಿಗಳ ದಂಡ ವಿಧಿಸಬಹುದು. ಇದರಿಂದ ಸಾರ್ವಜನಿಕ ಕೆಲಸ ಮಾಡುವವನು ಏನು ಮಾಡಬೇಕೆಂಬುದು ತೋಚದೆ ಸಂಕಟಕ್ಕೀಡಾಗಬೇಕಾಗುತ್ತದೆ. ಇಂಥ ಕಲಮುಗಳನ್ನು ಹಾಕಿದರೆ ಸಾರ್ವಜನಿಕ ಕೆಲಸದಲ್ಲಿ, ಸರ್ಕಾರಿ ಸಂಸ್ಥೆಗಳಲ್ಲಿ ಶ್ರದ್ಧೆವಹಿಸುವ ಜನರು ಓಡಿ ಹೋಗುತ್ತಾರೆ. ಅದ್ದರಿಂದ ಸಂಸ್ಥೆಗಳನ್ನು ಸಾರ್ವಜನಿಕರ ಶಕ್ತಿಯನ್ನು ಕುಂದಿಸುವಂತೆ ಕೇವಲ ತಾಸಿಲ್ದಾರರ ಕಛೇರಿಗಳಂತೆ ಮಾಡಿದರೆ ತೊಂದರೆಯಾಗುತ್ತದೆ.

ಇನ್ನೊಂದು ವಿಷಯ.

> "Any person, who contravenes any other provision of this Act or any rule made thereunder shall be punishable with fine which may extend to two hundred rupees."

ಎಂದು ಹಾಕಿರುವ ಕಲಮು ಮಾಡಲ್ ಬಿಲ್ಲಿನಲ್ಲಿಲ್ಲ, ಇಲ್ಲಿ ಹಾಕಿದ್ದಾರೆ.

ಇನ್ನು ಫೈನಾನ್‌ಷಿಯಲ್ ಕಂಟ್ರೋಲ್ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಹೇಳಲು ಬಯಸುತ್ತೇನೆ. ಇತ್ತೀಚೆಗೆ ಏನಾಗಿದೆ ಎಂದರೆ ಪ್ಲ್ಯಾನಿಂಗ್ ಕಮಿಷನ್ ಅವರು ರಿಜರ್ವ್ ಬ್ಯಾಂಕ್ ವಿಷಯದಲ್ಲಿ ಕೆಲವು ಮಾಡಲ್ ಬೈಲಾಗಳನ್ನು ಮಾಡಿದ್ದಾರೆ. ಇವುಗಳನ್ನು ಮಾಡುವಾಗ ಜನತೆಯ ಅಭಿಪ್ರಾಯವನ್ನಾಗಲಿ ಸಹಕಾರ ಸಂಘಗಳಲ್ಲಿ ಕೆಲಸ ಮಾಡುವವರ ಅಭಿಪ್ರಾಯವನ್ನಾಗಲಿ ಗಮನಕ್ಕೆ ತೆಗೆದುಕೊಂಡು ಮಾಡಿಲ್ಲ. ಈ ರೀತಿ ಮಾಡುವಾಗ ಅವರಿಗೆ ಬುದ್ಧಿಯಿಲ್ಲ ಎಂದು ನಾನು ಹೇಳುವುದಿಲ್ಲ. ಅವರಲ್ಲಿ ಬುದ್ಧಿವಂತರು ಅನೇಕರು ಇದ್ದಾರೆ. ಈ ರೀತಿಯಾಗಿ ನಾನು ಯಾಕೆ ಹೇಳುತ್ತಿದ್ದೇನೆಂದರೆ ಯಾರಮೇಲೆ ಇಂಥ ಕಾನೂನಿನ ಪರಿಣಾಮವಾಗುತ್ತಿದೆಯೋ ಅಂಥವರ ಅಭಿಪ್ರಾಯವನ್ನು ಕೇಳಬೇಕಾಗಿತ್ತು. ಇಲ್ಲದಿದ್ದರೆ ಇದರಿಂದ ದುಷ್ಪರಿಣಾಮವಾಗುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ಸೇಲ್ಸ್ ಸೊಸೈಟಿಯಲ್ಲಿರುವ ರಿಜರ್ವ್ ಫಂಡಿನಲ್ಲಿ ಅರ್ಧದಷ್ಟನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ಡಿಪಾಜಿಟ್‌ಮಾಡಿ ಇಡಬೇಕೆಂದು ಇದೆ. ಒಂದು ಸಂಘದಲ್ಲಿ ಎರಡುಲಕ್ಷ ರೂಪಾಯಿ ರಿಜರ್ವ್ ಫಂಡ್ ಇದ್ದರೆ ಅದರಲ್ಲಿಯ ಒಂದು ಲಕ್ಷ ರೂಪಾಯಿಗಳನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ಡಿಪಾಜಿಟ್ ಮಾಡಬೇಕಾಗುತ್ತದೆ. ಈ ಡಿಪಾಜಿಟ್ ಮಾಡಿದ ಹಣದಮೇಲೆ ಶೇಕಡಾ ಮೂರರಷ್ಟು ಬಡ್ಡಿ ಕೊಡುತ್ತಾರೆ. ಒಂದು ವೇಳೆ ಅದೇ ಸೊಸೈಟಿಗೆ ಸಾಲ ಬೇಕಾದರೆ ಸಾಲ ತೆಗೆದುಕೊಂಡಿರತಕ್ಕ ಹಣದಮೇಲೆ ಶೇಕಡ $6\frac{1}{4}$ ಬಡ್ಡಿ ಹಾಕುತ್ತಾರೆ. ನಾವೇ ಇಟ್ಟಂಥ ಹಣವನ್ನು ನಾವು ಉಪಯೋಗಿಸುವುದಕ್ಕಾಗಿ ಸಾಲ ತೆಗೆದುಕೊಂಡಾಗ್ಗೆ ನಾವು ಶೇಕಡ $6\frac{1}{4}$ ಬಡ್ಡಿ ಕೊಡಬೇಕು ಎಂದು ಬೈಲಾ ಮಾಡಿದರೆ ಇದು ಎಂಥ ಬೈಲಾ ಆಗುತ್ತದೆ? ಇದು ನಿಜವಾಗಿಯೂ ವ್ಯವಹಾರಕ್ಕೆ ಸಮಂಜಸವಾಗಿ

(ಶ್ರೀ ಎಂ. ಆರ್. ಪಾಟೀಲ್)

ಆಗುವದಿಲ್ಲ. ಇದನ್ನು ಪರ್ಯಾಲೋಚನೆ ಮಾಡುವುದು ಅವಶ್ಯ.

ಇನ್ನೊಂದು ವಿಚಾರ. ಈ ಸಹಕಾರಿ ಸಂಘಗಳಿಗೆ ನಾಮಿನೇಟ್‌ಮಾಡಿ ಸದಸ್ಯರನ್ನು ಕಳಿಸುವುದು ಅಷ್ಟು ಸಮಂಜಸವಾಗಿಲ್ಲ. ಪ್ರಾಕ್ಟಿಕಲ್ ವರ್ಕಿಂಗಿನಲ್ಲಿ ಅದು ಸರಿಯಾಗಿ ಆಗುವುದಿಲ್ಲ. ರಿಜಿಸ್ಟ್ರಾರ ಆಫೀಸಿನಿಂದ ಬಂದ ಜನರು ಒಬ್ಬಿಬ್ಬರು ಇರಬಹುದು. ಆದರೆ ಬೇರೆಯವರನ್ನು ನಾಮಿನೇಟ್ ಮಾಡಿದರೆ ಅದರ ಪರಿಣಾಮ ಏನಾಗುತ್ತದೆ ಎಂದರೆ ಸರಿಯಾಗಿ ಕೆಲಸ ಮಾಡಲು ಆಗುವದಿಲ್ಲ. ಇನ್ನೊಂದು ಬೈಲಾದ ಪ್ರಕಾರ ಸೇಲ್ಸ್ ಸೊಸೈಟಿ ಅಥವಾ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಷೇರ್‌ಹೋಲ್ಡರ್ಸ್ ಪರವಾಗಿ ಇಬ್ಬರು ಸದಸ್ಯರು ಇರಬೇಕೆಂದು ಇದೆ. ಒಂದೊಂದು ಸೊಸೈಟಿಯಲ್ಲಿ ಸಾಧಾರಣವಾಗಿ ಮೂರು ಸಾವಿರ ಷೇರ್‌ಹೋಲ್ಡರ್ಸ್ ಇದ್ದಾರೆ. ಈ ರೀತಿಯಾಗಿ ಸುಮಾರು 70 ಸೊಸೈಟಿಗಳು ಇವೆ. ಒಂದುವೇಳೆ ಸೊಸೈಟಿಯ ಷೇರ್ ಬಂಡವಲನ್ನು ಬೆಳೆಸಬೇಕು ಎಂದು ಇದ್ದರೆ ಎರಡೇ ಸೀಟು ಕೊಡುವುದರಿಂದ ಏನೂ ಪ್ರಯೋಜನವಾಗುವದಿಲ್ಲ. ಈ ರೀತಿ ಮಾಡುವುದರಿಂದ ಜನರ ಪ್ರೋತ್ಸಾಹ ದೊರಕುವದಿಲ್ಲ. ಜನರು ಮುಂದೆ ಬಂದು ಹಣ ಕೊಡುವದಿಲ್ಲ. ಈ ರೀತಿ ಫೈನಾನ್ಷಿಯಲ್ ಕಂಟ್ರೋಲ್ ಇರುವುದರಿಂದ ಒಂದು ತರದ ದುಷ್ಪರಿಣಾಮವಾಗುತ್ತದೆಎಂದು ನಾನು ಹೇಳುತ್ತೇನೆ. ನಮ್ಮ ಸಹಕಾರಿ ಸಂಘಗಳಲ್ಲಿ ಒಕ್ಕಲಿಗರೇ ಹೆಚ್ಚಾಗಿ ಇರಬೇಕೆಂದು ನಿಯಮವಿದೆ, ದುಡ್ಡು ಕೊಡುತ್ತಾರೆಂದು ವ್ಯಾಪಾರಸ್ಥರನ್ನು ಒಳಗೆ ಬರಗೊಡುವುದಿಲ್ಲ. ಆದಕಾರಣ ಷೇರ್ ಬಂಡವಲು ಹೆಚ್ಚಾಗಲು ಅನುಕೂಲವಾಗುವುದಿಲ್ಲ. ಇನ್ನು ಈ ಮಸೂದೆಯ ಪ್ರಕಾರ ಒಂದು ಪ್ರೊವಿಜನ್ ಏನು ಇದೆ ಎಂದರೆ ಯಾವುದೇ ಸೊಸೈಟಿಯಲ್ಲಿ ಸರಕಾರದವರು ಷೇರ್ ಬಂಡವಳ ತೊಡಗಿಸಿದ್ದರೆ ಸರ್ಕಾರದವರು ನಾಮಿನೇಷನ್‌ಮಾಡಿದ ನಾಮಿನೇಟೆಡ್ ಮೆಂಬರುಗಳು ಇರತಕ್ಕದ್ದು. ಸರ್ಕಾರದವರು ತೊಡಗಿಸಿದ ಹಣದ ಸಂರಕ್ಷಣೆಮಾಡುವುದಕ್ಕಾಗಿ ಈ ನಾಮಿನೇಟೆಡ್ ಮೆಂಬರುಗಳು ಇರಬೇಕೆಂದು ಇದೆ. ಈ ರೀತಿ ಮಾಡಿರುವುದು ಪರಿಣಾಮಕಾರಿ ಕಾಯದೆ ಆಗಲಾರದು. ಏಕೆಂದರೆ ನಾಮಿನೇಟೆಡ್ ಆದ ಒಬ್ಬಿಬ್ಬರು ಮೆಂಬರುಗಳು ಇರಬಹುದು. ಪ್ರತಿದಿನದ ಆಡಳಿತದಲ್ಲಿ ಏನೇನು ನಡೆದಿದೆ ಎಂಬುದನ್ನು ನೋಡುವುದಕ್ಕೆ ಅವರಿಗೆ ಅಷ್ಟು ಉತ್ಸಾಹ ಶಕ್ತಿ ಇರುವುದಿಲ್ಲ. ಕಮಿಟಿ ಮೀಟಿಂಗಿಗೆ ಅಷ್ಟೇ ಬಂದುಹೋಗುತ್ತಾರೆ. ಹೆಚ್ಚು ಗಮನ ಕೊಡುವುದಿಲ್ಲ. ಇದರ ಅನುಭವ ನಮಗೆ ಇದೆ. ಮುಂಬಯಿ ಕರ್ನಾಟಕದಲ್ಲಿಯ ಮಾರ್ಕೆಟಿಂಗ್ ಸೊಸೈಟಿ ಮತ್ತು ಕೋ-ಅಪರೇಟಿವ್ ಸೊಸೈಟಿಗಳಲ್ಲಿ ಇಂಥ ನಾಮಿನೇಟೆಡ್ ಮೆಂಬರುಗಳು ಇದೇ ರೀತಿ ಬಂದು ಹೋಗುತ್ತಿದ್ದರು. ಅಂಥ ಸೊಸೈಟಿಗಳಲ್ಲಿ ಲಕ್ಷಾಂತರ ರೂಪಾಯಿ ಹಣ ಅಪವ್ಯಯವಾಯಿತು. ತಿಂಗಳಿಗೆ ಒಂದು ಸಾರಿ ಇವರೂ ಮೀಟಿಂಗಿಗೆ ಬಂದು ಹೋದರೆ ಪ್ರತಿದಿನದ ಆಡಳಿತೆಯಲ್ಲಿ ನಡೆಯುವುದು ಅವರಿಗೆ ಗೊತ್ತಾಗುವುದಿಲ್ಲ. ಮೀಟಿಂಗಿಗೆ ಬಂದರೂ ಹೆಚ್ಚಾಗಿ ಗಮನ ಕೊಡುವುದಿಲ್ಲ. ಸರ್ಕಾರದವರು ಹೆಚ್ಚಾಗಿ ಹಣವನ್ನು ಈ ಸಹಕಾರಿಸಂಘಗಳಿಗೆ ಕೊಡುತ್ತಾರೆ. ಸರಕಾರದವರು ಕೊಡತಕ್ಕ ಲಕ್ಷಗಟ್ಟಲೆ ಹಣ ಸುರಕ್ಷಿತವಾಗಿ ಇರಬೇಕೆಂದು ಸರ್ಕಾರದವರ ಇರಾದೆ ಇದ್ದರೆ, ಸರ್ಕಾರದಿಂದ ನಿಯಮಿಸಲ್ಪಟ್ಟ ಒಬ್ಬ ಅಕೌಂಟೆಂಟ್ ಆಗಲಿ, ಮ್ಯಾನೇಜರ್ ಆಗಲಿ ಅಥವಾ ಯಾವದೇ ಒಂದುಹುದ್ದೆಯಲ್ಲಿ ಸರ್ಕಾರದ ಒಬ್ಬ ಅಧಿಕಾರಿಯನ್ನು ಇಟ್ಟು ದಿನಂಪ್ರತಿ ನಡೆಯತಕ್ಕ ಆಡಳಿತ ವ್ಯವಹಾರವನ್ನು ಪರಿಶೀಲಿಸಿ ರಿಪೋರ್ಟುಮಾಡಬೇಕು. ಪ್ರತಿದಿನದ ಆಡಳಿತದಲ್ಲಿ ಅವರು ಕೈಹಾಕದೇ ಇರಬಹುದು. ಆದರೆ ಪ್ರತಿದಿನ ನಡೆಯುತಕ್ಕಂಥ ವ್ಯವಹಾರದ ಬಗ್ಗೆ ಸರ್ಕಾರಕ್ಕೆ ಅರಿವು ಬರುವಂತೆ ರಿಪೋರ್ಟುಮಾಡತಕ್ಕ ಒಬ್ಬ ಅಧಿಕಾರಿಯನ್ನು ನೇಮಕಮಾಡಿದರೆ ಉಪಯೋಗವಾಗುತ್ತದೆ. ಇಲ್ಲದಿದ್ದರೆ ಈ ನಾಮಿನೇಟ್ ಮಾಡುವುದರಿಂದ ಏನೂ ಪರಿಣಾಮವಾಗುವುದಿಲ್ಲ. ಇಂಥ ಸೊಸೈಟಿಗಳಲ್ಲಿ ನಾನೂಸಹ ಒಬ್ಬ ಮೆಂಬರು ಆಗಿದ್ದೇನೆ. ಅಲ್ಲಿ ಕೆಲವು ನಾಮಿನೇಟೆಡ್ ಮೆಂಬರ್ಸ್ ಇದ್ದಾರೆ. ಮೀಟಿಂಗಿಗೆ ಬಂದರೆ ಅಜೆಂಡಾ ಏನು ಇದೆ ಇಷ್ಟು ನೋಡಿಕೊಂಡು ಬರುತ್ತಾರೆ. ಅವರಿಗೆ ಚೆಕ್ ಮಾಡಲು ಸಾಧ್ಯವಾಗುವುದಿಲ್ಲ. ಹೀಗೆ ನಾಮಿನೇಟೆಡ್ ಮೆಂಬರುಗಳನ್ನು ಇಟ್ಟಿರುವುದರ ಪರಿಣಾಮ ಕೇವಲ ರಾಜಕೀಯ ಪರಿಣಾಮವಾಗುತ್ತದೆಯೇ ಹೊರತು ಬೇರೆ ಏನೂ ಇಲ್ಲ. ನಾಮಿನೇಟೆಡ್ ಮೆಂಬರುಗಳು ಮೀಟಿಂಗಿಗೆ ಬಂದು ಹರಟೆ ಹೊಡೆದುಹೋಗುತ್ತಾರೆ. ಎಷ್ಟೋ ಸಾರಿ ಅವರು ಬರುವುದೇಇಲ್ಲ. ಹೀಗೆ ಇರುವುದರಿಂದ ನಾಮಿನೇಟೆಡ್ ಮೆಂಬರುಗಳು ಹಿತರಕ್ಷಣೆಮಾಡುತ್ತಾರೆ ಎಂಬುದು ಸರಿಯಲ್ಲ. ಎಲೆಕ್ಟೆಡ್ ಮೆಂಬರುಗಳು ಜನರ ಪ್ರತಿನಿಧಿಗಳು ಆಗಿರುವುದರಿಂದ ಅಂಥವರು ಜನರಿಗೆ ಜವಾಬ್ದಾರರಾಗಿರುತ್ತಾರೆ. ಇವರು ಮಾತ್ರ ಯಾರಿಗೂ ಜವಾಬ್ದಾರರಾಗಿರುವದಿಲ್ಲ. ಚುನಾಯಿತ ಸದಸ್ಯರು ಅವಧಿ ಮುಗಿದ ನಂತರ ಪುನಃ ಚುನಾವಣೆಗೆ ಹೋಗಬೇಕಾಗುತ ದೆ; ಮತ್ತು ಮಾಡಿದ ಕೆಲಸಕಾರ್ಯಗಳಿಗೆ explanation ಕೊಡಬೇಕಾಗುತ್ತದೆ. ಆದರೆ ಎಲ್ಲ ನಾಮಿನೇಟೆಡ್ ಮೆಂಬರ್ಸ್ ಹೀಗೆಯೇ ಇರುತ್ತಾರೆಂದು ನಾನು ಹೇಳುವುದಿಲ್ಲ. ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಸರ್ಕಾರದ ದುಡ್ಡು ಬಚಾವು ಆಗಬೇಕಾಗಿದ್ದರೆ ಸರಕಾರದ ನವಕರನೊಬ್ಬನನ್ನು ಇಡತಕ್ಕದ್ದು ಅಗತ್ಯ. ಅವರು ಮೇಲಿಂದಮೇಲೆ ರಿಪೋರ್ಟುಮಾಡುತ್ತಿರಬೇಕು. ಆದರೆ ನಿತ್ಯ ಆಡಳಿತದಲ್ಲಿ ಕೈಹಾಕಬಾರದು. ಈ ಸಂಸ್ಥೆಗಳಲ್ಲಿ ಏನಾದರೂ ಹಯಾಗಯಮಾಡಿ ಭಾನಗಡಿಯಾದರೆ ಅಂಥವರನ್ನು ಶಿಕ್ಷೆಗೆ ಗುರಿಮಾಡಬೇಕು. ಈ ರೀತಿ ಕೆಲಸಮಾಡುವ ಕ್ರಮವನ್ನು ಕೈಕೊಂಡರೆ ಮಾತ್ರ ಹಣದ ಅಪವ್ಯಯವಾಗುವುದು ನಿಲ್ಲುತ್ತದೆ, ಹಣ ಸುರಕ್ಷಿತವಾಗಿ ಉಳಿಯುತ್ತದೆ.

Dr. R. NAGAN GOWDA.—What is the opinion of the Hon'ble Member regarding *ex-officio* members being nominated on the Board of Directors ?

Sri M. R. PATIL.—By '*ex-officio*' does he mean officials or non-officials ?

ಒಬ್ಬರು ಸರ್ಕಾರಿ ಅಧಿಕಾರಿಗಳು, ಒಬ್ಬರು ನಾಮಿನೇಟೆಡ್ ಮೆಂಬರು ಇರಬಹುದು. ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಇದು ಯಾವುದೂ ರಾಜಕೀಯಕ್ಕೆ ಕಾರಣವಾಗಬಾರದು. ಅವರು ಯಾವುದೇ ರಾಜಕೀಯದಲ್ಲಿ ಭಾಗ ತೆಗೆದುಕೊಳ್ಳಲು ಅವಕಾಶ ಕೊಡಬಾರದು. ಅವರು ಬೇಕಾದಷ್ಟು ಸಲಹೆ ಸೂಚನೆಗಳನ್ನು ಕೊಡುವುದಲ್ಲದೆ ಓಟುಕೂಡ ಚಲಾಯಿಸಬಹುದು. ಏಕಂದರೆ ಯಾವುದೇ ದುಷ್ಪರಿಣಾಮ ಉಂಟಾಗಬಾರದು. ಒಂದು ರೀತಿಯ ಚೆಕ್ ಇರುವಂತೆ ಆದರೆ ಲಕ್ಷಗಟ್ಟಲೆ ಹಣ ಅಪವ್ಯಯವಾಗುವು

ದಿಲ್ಲ. ಆದಕಾರಣ ಒಬ್ಬ ಆಫೀಸರನ್ನು ಇಡಲೇ ಬೇಕೆಂದು ನಾನು ಹೇಳುತ್ತೇನೆ.

11-30 A.M.

Sri D. DEVARAJ URS (Hunsur).—I cannot understand the argument of the Hon'ble Member. Where Government has invested money, he is prepared to allow an official to be nominated on the Board of Directors and also to give him the power of appealing to Government in cases where he differs from the Managing Committee. If he can allow that, I cannot understand why he cannot allow two or three members being nominated.

Sri M. R. PATIL.—I have no objection to one official or non-official being nominated. It should not be more than one. The mere presence of many non-official members on the Board of Directors will not cure the defects in the administration. Let there be only one member, but let him have the power of appeal to Government where he vitally differs from the administration. He shall exercise all powers of voting on every resolution, but he shall not vote only in election of office-bearers.

ಶ್ರೀ ಮಾಲಿ ಮರಿಯಪ್ಪ.—ತಾವು ಒಂದು proposition ಹೇಳುತ್ತಾ ಇದ್ದೀರಿ. ಈ ನಾಮಿನೇಷನ್ ತಪ್ಪಿಸಿ ಅಫಿಷಿಯಲ್ಸ್ ಅಥವಾ ನಾನ್ ಅಫಿಷಿಯಲ್ಸ್ ಪೈಕಿ ಒಬ್ಬ ಅಧಿಕಾರಿ ಅಲ್ಲದ್ದರೆ ಸಾಕ ಎಂದು. ಆ ಅಧಿಕಾರಿಗೆ ಒಂದೊಂದು ಸಲ ಆ 15 ಜನ ಬೋರ್ಡ್ ಆಫ್ ಡೈರೆಕ್ಟರ್ಸ್ ಮಾಡಿದ ತೀರ್ಮಾನವನ್ನು ತಡೆ ಹಿಡಿಯುವಷ್ಟು ಶಕ್ತಿ ಇದ್ದರೆ ತಾನೇ ಅಧಿಕಾರಿ ಇದ್ದು ಪ್ರಯೋಜನ ಆಗುವುದು ?

ಶ್ರೀ ಎಂ. ಆರ್. ಪಾಟೀಲ್.—ಯಾವ ಅಧಿಕಾರಿಯನ್ನು ನಾಮಿನೇಟ್ ಮಾಡುತ್ತೀರೋ ಅವನಿಗೆ ಅಧಿಕಾರ ಕೊಡಲಿಕ್ಕೆ ಅಭ್ಯಂತರವಿಲ್ಲ.

Sri T. MARIAPPA (Minister for Finance).—What are exactly the functions and duties of that particular Government official ?

Sri M. R. PATIL.—He should be a member of the Board of Directors. He should exercise all the powers as any other Director exercises except that he should not vote in the election of office-bearers. Where Government has invested money in a society, there is no objection even to giving him the power of appeal to Government in cases where he differs from the Managing Committee and the Government's decision may be treated as final.

Sri MALI MARIAPPA.—In that case you are in favour of a kind of veto being exercised by that nominee.

ಶ್ರೀ ಎಂ. ಆರ್. ಪಾಟೀಲ್.—55ನೆಯ ಸೆಕ್ಷನ್ ಈ ರೀತಿ ಇದೆ :

> "*Control of society assisted.*—In any case in which State aid is given to a co-operative society amounting to two lakhs of rupees or upwards the State Government shall, and in any other case may, by order published in the official Gazette, take power to ensure such control over the conduct of the business of the society as shall suffice in its opinion to safeguard its interests."

ಇಂಥ ಅನೇಕ ಕಲಂಗಳು ಈ ಕಾಯಿದೆಯಲ್ಲಿ ಇವೆ. ಈ ರೀತಿ ಸಾವಿರಾರು ಕಲಂಗಳನ್ನು ಹಾಕಿ ರಿಜಿಸ್ಟ್ರಾರ್ ಅವರು ದಿನಂಪ್ರತಿ ನಡೆಯತಕ್ಕ ಆಡಳಿತದಲ್ಲಿ ಕೈಹಾಕುವುದಕ್ಕೆ ಅವಕಾಶಮಾಡಿಕೊಡುವುದಕ್ಕಿಂತ ಎಲ್ಲಿ ಆಡಳಿತದಲ್ಲಿ ಭಾರಿಭಾರಿ ಲೋಪ ಕಂಡುರುತ್ತದೆ ಅಂತಹ ಕಡೆಯಲ್ಲಿ ಆ ಮ್ಯಾನೇಜಿಂಗ್ ಕಮಿಟಿಯನ್ನು ಸಸ್ಪೆಂಡ್ ಮಾಡಲು ಅಧಿಕಾರ ಕೊಡಿ. ಯೋಗ್ಯವಾಗಿ ಕೆಲಸಮಾಡುತ್ತಿವೆಯೋ ಎನ್ನುವಂಥ ಕೆಲಸವನ್ನು ಅವರು ನೋಡಿಕೊಳ್ಳುತ್ತಾರೆ. ಯಾವ ಸಂಸ್ಥೆಯಲ್ಲಿ ಆಡಳಿತ ಸರಿಯಾಗಿ ನಡೆಯುವುದಿಲ್ಲವೋ ಅದನ್ನು ಆಗಿಂದಾಗ್ಗೆ ಸಸ್ಪೆಂಡ್ ಮಾಡಿ ತಮ್ಮ ವಶಕ್ಕೆ ತೆಗೆದುಕೊಳ್ಳುವ ಅಥವಾ ಅಡ್ಮಿನಿಸ್ಟ್ರೇಟರನ್ನು ಗೊತ್ತುಮಾಡುವ ಅಧಿಕಾರವನ್ನಷ್ಟು ಕೊಟ್ಟರೆ ಎಲ್ಲಾ ಸರಿಹೋಗುತ್ತದೆ. ಅಷ್ಟುಮಾತ್ರ ಸಾಕು. ಸರ್ಕಾರದವರು ತಮಗೆ ಬೇಕಾದಂತೆ ತಮ್ಮ ಹತೋಟಿಗೆ ತೆಗೆದುಕೊಳ್ಳಲು ಅವಕಾಶ ಈ ಸೆಕ್ಷನ್ ಏನಿದೆ ಇದಕ್ಕೆ ನನ್ನ ಒಪ್ಪಿಗೆ ಇಲ್ಲ. ಏಕೆಂದರೆ ಇಂತಹ ಇನ್ನೂ ಅನೇಕ ಬೇರೆ ಕಲಂಗಳು ಈ ಬಿಲ್ಲಿನಲ್ಲಿ ಇವೆ. ಆ ಅಧಿಕಾರಗಳನ್ನು ರಿಜಿಸ್ಟ್ರಾರ್ ಅವರು ಉಪಯೋಗಮಾಡಿದರೆ ಈ ಕಲಂನಲ್ಲಿ ಏನು ಉಪಾಯ ಇದೆಯೋ ಅದಕ್ಕಿಂತ ಹೆಚ್ಚು ಸಿಕ್ಕುತ್ತದೆ. ಹೀಗಿದ್ದು ಈ ಕಲಂಗೆ ನನ್ನ ಒಪ್ಪಿಗೆ ಇಲ್ಲ.

ಶ್ರೀ ಎ. ಎಸ್. ಪಾಟೀಲ್ (ನರಗುಂದ).—ರಿಜಿಸ್ಟ್ರಾರ್ ಅವರಿಗೆ ಬಹಳ ಅಧಿಕಾರ ಕೊಟ್ಟಿದ್ದೀರಿ, ಅದನ್ನೆಲ್ಲಾ ತೆಗೆದು ಸ್ವಲ್ಪ ಅಧಿಕಾರಕೊಟ್ಟರೆ ಸಾಕುಎಂದು ಹೇಳುತ್ತೀರಾ ?

ಶ್ರೀ ಎಂ. ಆರ್. ಪಾಟೀಲ್.—ದಯಮಾಡಿ ತಪ್ಪು ತಿಳಿದುಕೊಳ್ಳಬಾರದು. ರಿಜಿಸ್ಟ್ರಾರ್ ಅವರಿಗೆ ಈಗಾಗಲೇ ಕೆಲವು ಅಧಿಕಾರಗಳು ಇವೆ. ಅದರ ಜೊತೆಗೆ ಇನ್ನೂ ಕೆಲವು ಹೆಚ್ಚು ಅಧಿಕಾರವನ್ನು ಕೊಟ್ಟಿದ್ದೀರಿ. ಅದರಿಂದ ಸಾಮಾನ್ಯ ಜನರು ಭಯಪಟ್ಟು ಈ ಸಾರ್ವಜನಿಕ ಸಂಸ್ಥೆಗಳನ್ನು ಬಿಟ್ಟು ಓಡಿಹೋಗತಕ್ಕ ಪರಿಸ್ಥಿತಿಯನ್ನು ಉಂಟುಮಾಡಬಾರದು. ಎಲ್ಲಿ ಅಪವ್ಯಯ ಆಡಳಿತ ನಡೆಯುತ್ತದೆ, ದುರ್ವ್ಯವಹಾರ ನಡೆಯುತ್ತದೆ ಅದನ್ನು ಆಗಿಂದಾಗ್ಗೆ ಸಪ್ರೆಸ್ ಮಾಡಲಿಕ್ಕೆ ಬೇಕಾದಂಥ ಈ ಒಂದು ಕಲಂನ್ನು ಹಾಕುವುದರಿಂದ ಸಾರ್ವಜನಿಕರು ಭಯಪಟ್ಟು, ಏನಾದರೂ ಸಣ್ಣ ತಪ್ಪು ಮಾಡಿದರೂ ಶಿಕ್ಷೆ, ಮೋಕ್ಷ, ದಂಡ ಎನ್ನುವುದಾದರೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಿ ಸಂ ಥ

(ಶ್ರೀ ಎಂ. ಆರ್. ಪಾಟೀಲ್)

ಯನ್ನು ಬಿಟ್ಟುಬಿಡುತ್ತಾರೆ. ದಿನಂಪ್ರತಿ ಆಡಳಿತದಲ್ಲಿ ಕೈಹಾಕುವುದು ಬೇಡ ಎಂದು ಹೇಳುತ್ತೇನೆ.

13ನೆಯ ಕಲಂನಲ್ಲಿ ಈ ರೀತಿ ಇದೆ:—Registrar's powers to direct amendment of bye-laws.—ಇದರಲ್ಲಿ ಏನಾಗಿದೆಎಂದರೆ ಯಾವುದೇ ಒಂದು ಸೊಸೈಟಿಅವರು, ಅವರು ಹೇಳತಕ್ಕ bye-lawಗೆ ಒಪ್ಪಿಗೆ ಇಲ್ಲ ಎಂದರೂ ಸಹ ರಿಜಿಸ್ಟ್ರಾರ್ ಅವರು ಹೇಳುವಂಥ ತಿದ್ದುಪಡಿ ತರಲೇಬೇಕು. ಇವು ಜನತಾ ಸಹಕಾರಸಂಸ್ಥೆಗಳು, ಇದರಲ್ಲಿ "ಸಹಕಾರ" ಮತ್ತು "ಒತ್ತಾಯ" ಈ ಎರಡು ಶಬ್ದಗಳು ಏನಿವೆ ಇವು ಒಂದಕ್ಕೊಂದಕ್ಕೆ ಹೊಂದಿಕೆಆಗದಂಥ ಶಬ್ದಗಳು. ಎಲ್ಲಿ ಸಹಕಾರ ಇದೆ ಅಲ್ಲಿ ಒತ್ತಾಯ ಎನ್ನುವಂಥ ಅಂಶ ಹಾಕಿದರೆ, "ಮಸಿ", "ಸುಣ್ಣ", ಒಂದಕ್ಕೊಂದು ಕ್ಯಾನ್ಸಲ್ ಆದಹಾಗೆ ಆಗುತ್ತದೆ. ಒಂದು ಬೈಲಾಗೆ ತಿದ್ದುಪಡಿ ತರಲೇಬೇಕು ಎಂದು ಮೇಲಿನ ಅಧಿಕಾರಿಗಳು ಒತ್ತಾಯಪಡಿಸಿದ್ದೇಆದರೆ ಒಂದು ಅಂಶ ಹೇಳುತ್ತೇನೆ. ನಮ್ಮಲ್ಲಿರತಕ್ಕ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಉದ್ರಿಮೇಲೆ ವ್ಯವಹಾರ ಮಾಡುವವರೇ ಜಾಸ್ತಿ. ಇವತ್ತಿನ ದಿವಸ cash dealings ಮಾಡಬೇಕು ಎಂದು ಹೇಳಿ bye-law ತಿದ್ದುಪಡಿ ಮಾಡಬೇಕೆಂದು ಒತ್ತಾಯಪಡಿಸಿದರೆ, ಖರೀದಿದಾರರು ನಮ್ಮ ಸಂಘದ ಹತ್ತಿರವೇ ಬರುವುದಿಲ್ಲ. ಅಷ್ಟೇಅಲ್ಲ 10-15 ವರ್ಷಗಳಿಂದ ವ್ಯವಹಾರ ನಡೆಸುತ್ತಿರತಕ್ಕ ಜನಗಳನ್ನು ನಾವು ಕೈಬಿಡಬೇಕಾಗುತ್ತದೆ. ಇದನ್ನು ಪೂರ್ಣವಾಗಿ ವಿಚಾರಮಾಡಬೇಕು.

ಈ ರೀತಿಯಾಗಿ ರಿಜಿಸ್ಟ್ರಾರ್ ಅವರು ಬೈಲಾಗಳನ್ನು ಒತ್ತಾಯಮಾಡಿ ತರಲಿಕ್ಕೆ ಅಧಿಕಾರವನು ಕೊ[illegible]ಬಾರದು. ಈಗ ರಿಸರ್ವ್ ಬ್ಯಾಂಕಿನವರು ಒಂದು ರೀತಿಯಾದ "ಅಡ್ವೈಸ"ನ್ನು ಕೊಡುತ್ತಾರೆ. ಒತ್ತಾಯವೇನೂ ಮಾಡುವುದಿಲ್ಲ. ಹೀಗೆ ಬೈಲಾಗಳನ್ನು ಒತ್ತಾಯದಿಂದ ಮಾಡಲಿಕ್ಕೆ ಹೋದರೆ ಸಹಕಾರ ಸಂಸ್ಥೆಗಳಲ್ಲಿ ಕೆಲಸಮಾಡುವುದೇ ಕಷ್ಟವಾಗುತ್ತದೆ. ಈ ರೀತಿಯಾಗಿ ಬೈಲಾಗಳನ್ನು ಬದಲಾವಣೆಮಾಡಿ ಒತ್ತಾಯಮಾಡುವುದರ ಉದ್ದೇಶವೇನು ಎನ್ನುವುದರಲ್ಲಿ ಅರ್ಥವೇನಿದೆಯೋ ನನಗೇನೂ ಕಾಣಿಸುವುದಿಲ್ಲ. ಹೀಗೆ ಹೇಳುವುದರಿಂದ ಯೋಗ್ಯರಾದವರು ಈ ಸಂಸ್ಥೆಗಳಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ನನ್ನ ಅಭಿಪ್ರಾಯದಲ್ಲಿ financial holdsನ್ನು ಬೇಕಾದರೆ ತೆಗೆದುಕೊಳ್ಳಲಿ. ಆದುದರಿಂದ ಎಲ್ಲ ಅಧಿಕಾರಗಳನ್ನೂ ರಿಜಿಸ್ಟ್ರಾರ್‌ಅವರಿಗೇ ಕೊಡುವುದನ್ನು ಬಿಟ್ಟುಬಿಡಬೇಕು. ಯಾವುದೇ ಬೈಲಾವನ್ನೇ ಆಗಲಿ ಬದಲಾವಣೆಮಾಡುವ ಅಧಿಕಾರ ರಿಜಿಸ್ಟ್ರಾರ್‌ಅವರಿಗೆ ಕೊಡುವುದು ಒಳ್ಳೆಯದಲ್ಲ ಎಂದು ನನ್ನ ಅಭಿಪ್ರಾಯ.

ಮತ್ತೆ, 31ನೆಯ ಕಾಲಮು (2) ರಲ್ಲಿ ಮಾಡಲ್‌ಬಿಲ್ಲು 31ರಲ್ಲಿದ್ದಂತೆ ಇಲ್ಲ. ಇಲ್ಲಿ 31ನೇ ಕಾಲಮು ಸಬ್ ಕ್ಲಾಸು (2)ರಲ್ಲಿ ಹೀಗೆ ಹೇಳಿದ್ದಾರೆ:

> '31. (2) If any member of a committee of any co-operative society—
>
> (*a*) becomes subject to any disqualification specified in sub-section (1);
>
> (*b*) has neglected or is neglecting his duties as a result of which the co-operative society has suffered or is suffering or is likely to suffer loss;
>
> (*c*) has misappropriated or is believed to have misappropriated the funds of the co-operative society;
>
> (*d*) has been responsible directly or indirectly for the mismanagement of the affairs of the co-operative society;
>
> (*e*) has unnecessarily retained the funds of the co-operative society;
>
> (*f*) has acted or is acting in any manner prejudicial to the interest of the co-operative society;
>
> (*g*) has appeared or is appearing as a legal practitioner against the co-operative society concerned or anyother co-operative society which is a member of the co-operative society;
>
> (*h*) has been or is acting against the interests of the co-operative society concerned or against the co-operative movement in general;'

ಈ ಪ್ರಕಾರ ಅನರ್ಹತೆಗಳ ವಿಚಾರವಾಗಿ ಹೇಳಿದೆ. ಅಲ್ಲದೆ ಒಮ್ಮೊಮ್ಮೆ ರಿಜಿಸ್ಟ್ರಾರಾಗಿ ಬರುವವರು ವಿಶಾಲಭಾವನೆಯಿಂದ ಕೂಡಿರುವವರು, ಜನಗಳಿಗೆ ಸೌಕರ್ಯವನ್ನು ಮಾಡುವವರು ಬರುತ್ತಾರೆ. ಒಮ್ಮೊಮ್ಮೆ ಅಷ್ಟು ಒಳ್ಳೆಯ ಸದ್ಗೃಹಸ್ಥರು ಬಾರದೆ ಇರಬಹುದು. ಆದಕಾರಣ ನಾನು ಸೂಚನೆಮಾಡುವುದು ರಿಜಿಸ್ಟ್ರಾರವರ ಕೈಗೆ ಹೆಚ್ಚಾಗಿ ಅಧಿಕಾರಗಳನ್ನು ಕೊಡಬಾರದು. ಇಲ್ಲಿ ಕೊಟ್ಟಿರುವ ಅಧಿಕಾರಗಳು ಬಹಳ vague ಆಗಿವೆ. ಯಾವುದೂ ನಿರ್ಣಯಕಾರಕವಾಗಿಲ್ಲ. ಅಂತಹ ನಿರ್ಣಯಕಾರಕವಾದ ಕಾಲಂ ಅನ್ನು ಇಲ್ಲಿ ಹಾಕಬೇಕು.

31 (1) (*b*)—"If he is a relative of a paid employee of the co-operative society concerned."

But if he is a paid employee of some other society, why should he not become a member of any other society? ಇದರಲ್ಲಿ ತಪ್ಪೇನೂ ನನಗೆ ಕಾಣಿಸುವುದಿಲ್ಲ. ಒಮ್ಮೊಮ್ಮೆ ನಮ್ಮ relative ಆಗಿದ್ದರೆ ಅದರಿಂದ ತೊಂದರೆ ಏನು? ಇದು ಹೇಗಿದೆ ಎಂದರೆ ಒಂದು ಚೂರಿಗೆ ಎರಡುಕಡೆಕತ್ತಿ ಇರುವಂತೆ ಇದೆ. ಯಾವ ಸಂಸ್ಥೆಯಲ್ಲಾದರೂ ದುರಾಡಳಿತ ನಡೆಯುತ್ತಿದ್ದರೆ ಅದನ್ನು ತಪ್ಪಿಸಲಿಕ್ಕೆ ಅನುಕೂಲವಾಗಬಹುದು. ಆದಷ್ಟು ಮಟ್ಟಿಗೆ ಈ ಕಲಮ್ಮಿಗೆ ನಾನು ವಿರೋಧವಾಗಿದ್ದೇನೆಂದು ತಾವು ತಿಳಿದುಕೊಳ್ಳಬಾರದು.

ಇನ್ನು ಕಲಮು (32)ರಲ್ಲಿ ಸಮಿತಿಯನ್ನು ರದ್ದುಗೊಳಿಸುವ ಅಧಿಕಾರವನ್ನು ರಿಜಿಸ್ಟ್ರಾರ್ರವರಿಗೆ ಕೊಟ್ಟಿದ್ದಾರೆ. ನನ್ನ ಅಭಿಪ್ರಾಯ ಹೀಗಿದೆ. ಯಾವುದೇ

ಸಂಸ್ಥೆಯ ಸಮಿತಿಯಾಗಲಿ ತಪ್ಪುಮಾಡದೇ ಇರುವುದಿಲ್ಲ. ತಪ್ಪುಮಾಡಬಹುದು. ಆದರೆ ಈ ಬಗ್ಗೆ ಸೂಚನೆ ರೂಪದಾಗಿ ರಿಜಿಸ್ಟ್ರಾರವರು ಹೇಳಬಹುದು. ನಮ್ಮ ಬಾಂಬೆ ಕಡೆಗಳಲ್ಲಿ :

"On the recommendation of the Registrar to the Government the Committee may be superseded.'

ಎಂದು ಹಾಕಲಾಗಿತ್ತು. ಅದರಂತೆ ಇಲ್ಲಿರುವುದು ಸರಿಯಿಲ್ಲ.

ಮಾಡಲ್‌ಬಿಲ್ಲು 35ನೆಯ ಕಲಮಿನಲ್ಲಿ ಸ್ಟೇಟ್ ಗವರ್ನ್‌ಮೆಂಟಾಗಲಿ ಸೆಂಟ್ರಲ್ ಗವರ್ನ್‌ಮೆಂಟಾಗಲಿ ಯಾವುದೇ ಟ್ಯಾಕ್ಸನ್ನು ಎಂದರೆ ಇನ್‌ಕಂಟ್ಯಾಕ್ಸು ಅಥವಾ ಬೇರೆ ಟ್ಯಾಕ್ಸನ್ನು ಸಹಕಾರ ಸಂಸ್ಥೆಗಳುಕೊಡಬೇಕಾದುದಿಲ್ಲವೆಂದು ಕಾಯಿದೆ ಇತ್ತು. ಈ ಕಾಯಿದೆಯಲ್ಲಿ ಇದನ್ನು ಏಕೆ ಸೇರಿಸಿಲ್ಲವೋ ನನಗೆ ಗೊತ್ತಿಲ್ಲ ಮಾಡಲ್‌ಬಿಲ್ 35ನೆಯ ಕಲಮನ್ನು ಬಿಟ್ಟುಬಿಟ್ಟಿದ್ದಾರೆ.

ಇನ್ನು ಕಲಮು (42)ರಲ್ಲಿ Direct partnership ವಿಚಾರವಾಗಿ ಹೀಗೆ ಹೇಳಿದ್ದಾರೆ:

"42. Direct partnership of State Government in co-operative societies. (1) The State Government may subscribe directly to the share capital of a co-operative society with limited liability."

ನಾನು ಈಗಾಗಲೆ ಈ ವಿಚಾರವಾಗಿ ಹೇಳಿದ್ದೇನೆ. ಸಂಘದ ಸ್ಥಿತಿಯನ್ನು ಉತ್ತಮಗೊಳಿಸುವ ಉದ್ದೇಶದಿಂದ ಈ ಕಲಮು ಇಟ್ಟಿಲ್ಲ. ಆ ನೆಪದಲ್ಲಿ 'ನಾಮಿನೇಷನ್' ಅಧಿಕಾರವನ್ನು ಪಡೆದುಕೊಳ್ಳಬೇಕೆನ್ನುವುದೆ ಸರಕಾರದ ಉದ್ದೇಶವಾಗಿದೆ. ಯಾವ ಸಂಸ್ಥೆಯೇ ಆಗಲಿ ತನ್ನ ಕಾಲಮೇಲೆ ನಿಂತುಕೊಂಡಿರಬೇಕು ಎಂಬ ಗುರಿಯನ್ನಿಟ್ಟುಕೊಂಡಿರುತ್ತದೆ. ಒಂದು ಪಕ್ಷ ಸಂಘಗಳ ಆರ್ಥಿಕಸ್ಥಿತಿ ಹಾಗಿಲ್ಲದಿರುವಾಗ, ಸರಕಾರದವರು ಅವುಗಳ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಮುಂದೆ ಬಂದು ಸಾಕಷ್ಟು ಷೇರುಗಳನ್ನು ಕೊಂಡುಕೊಳ್ಳುವುದಾದರೆ ಇದಕ್ಕೆ ನನ್ನ ಒಪ್ಪಿಗೆ ಇದೆ. ಆದರೆ ಇದು ಅದರ ಉದ್ದೇಶವಾಗಿಲ್ಲ. ಸಂಸ್ಥೆಗಳು ಷೇರುಗಳನ್ನು ಕೊಂಡುಕೊಳ್ಳಲೇಬೇಕೆಂದು ಸರಕಾರವನ್ನು ಒತ್ತಾಯಪಡಿಸುತ್ತಿರುವುದಿಲ್ಲ. ಹಾಗಿದ್ದರೂ, ತಮಗೆ ಷೇರುಗಳನ್ನು ಕೊಡಲೇಬೇಕು ಎಂದು ಸರಕಾರದವರು ಒತ್ತಾಯಮಾಡುತ್ತಾರೆ. ಹೀಗೆ ಇವುಗಳ ನಡುವೆ 'ದ್ವಂದ' ಉಂಟಾಗುತ್ತಿರುತ್ತದೆ.

ಹೀಗೆ ಪ್ರಜಾಪ್ರಭುತ್ವವಿರುವ ಈ ಸಂಸ್ಥೆಗಳು ತಮ್ಮ ಕಾಲಮೇಲೆ ನಿಂತುಕೊಂಡು ತಮ್ಮ ಆರ್ಥಿಕ ಪರಿಸ್ಥಿತಿ ಭದ್ರವಾಗಿದೆ ಎಂದು ಹೇಳುವಾಗ ಷೇರುಗಳನ್ನು ತಮಗೆ ಕೊಡಲೇಬೇಕು ಎಂದು ಸರಕಾರದವರು ಒತ್ತಾಯಪೂರ್ವಕವಾಗಿ ಆದೇಶಗಳನ್ನು ಹೊರಡಿಸಲು ಈ ಕಲಮಿನ ಮೂಲಕ ಅವಕಾಶ ಮಾಡಿಕೊಡುವುದು ಸರಿಯಲ್ಲ; ಇನ್ನು ನಮ್ಮ ಕೆಲವು ಮಾನ್ಯ ಮಿತ್ರರು ರಿಜಿಸ್ಟ್ರಾರ್ ಅವರಿಗೆ ಕೊಟ್ಟಿರುವ ಅಧಿಕಾರಗಳ ವಿಷಯವಾಗಿ ಮಾತನಾಡಿದರು. 64, 65, 67 ಮತ್ತು 68 ಈ ಕಲಮುಗಳು ಇರಬೇಕು ಎಂಬುದು ನನ್ನ ಅಭಿಪ್ರಾಯ. ಏಕೆಂದರೆ, ಕಲಮು 64 ಆಡಿಟ್ ಮತ್ತು ಇನ್ಸ್‌ಪೆಕ್ಷನ್ನಿಗೆ ಸಂಬಂಧಿಸಿದ್ದು. ಆದುದರಿಂದ ಇದಕ್ಕೆ ನನ್ನ ಒಪ್ಪಿಗೆಯುಂಟು. 65, 66 ಮತ್ತು 67 ಈ ಕಲಮುಗಳ ಬಗೆಗೂ ನನಗೆ ಒಪ್ಪಿಗೆ ಇದೆ. ಕಲಮು 68 ಎಲ್ಲ ಎನ್‌ಕ್ವೈರಿಗಳ ಸಂಬಂಧದ ಖರ್ಚನ್ನು ಹಂಚುವುದಕ್ಕಾಗಿ ರಿಜಿಸ್ಟ್ರಾರ್ ಅವರಿಗಿರುವ ಅಧಿಕಾರಕ್ಕೆ ಸಂಬಂಧಿಸಿದುದು. ಇದಕ್ಕೂ ನನ್ನ ಒಪ್ಪಿಗೆಯುಂಟು. ಕಲಮು 69ರಲ್ಲಿ ರಿಜಿಸ್ಟ್ರಾರ್ ಅವರು ಮಾಡುವ ಆರ್ಡರಿನ ವಿಚಾರದ ಪ್ರಸ್ತಾಪವಿದೆ. ಇದು ಬಹುಮುಖ್ಯ ವಿಚಾರ. ಇದು ಮಾಡಲ್ ಆಕ್ಟಿನಲ್ಲಿಲ್ಲ.

ಇಲ್ಲಿದೆ ·

"69. Order by the Registrar: The Registrar may make an order directing the co-operative society or its officers to take such action as may be specified in the order within the time mentioned therein to remedy the defects disclosed in the audit under section 64 or the inquiry under section 65 or inspection under section 66.'

ಎಂದು ಹೇಳಿದೆ. ಆದರೆ ಇದನ್ನು ಕಲಮು 109 (3)ರ ಜೊತೆಗೆ ಓದಿದರೆ ಇದರಅರ್ಥ ಸ್ಪಷ್ಟವಾಗಿ ಆಗುತ್ತದೆ. ಕಲಮು 109 (3)ರಲ್ಲಿ ಹೀಗೆ ಹೇಳಿದ್ದಾರೆ :

" A co-operative society or an officer or member thereof wilfully making a false return or furnishing false information, or any person wilfully or without any reasonable excuse disobeying any summons, requisition or lawful written order issued under the provisions of this Act or wilfully not furnishing any information or handing over any documents or property required from him by a person or body of persons authorised in this behalf under the provisions of this Act, shall be punishable with imprisonment which may extend to six months or with fine or with both."

ಸ್ವಾಮಿ, ಆಡಿಟ್ ರಿಪೋರ್ಟಿನಲ್ಲಿ ಎಲ್ಲ ತರಹ ತಕ್ಸೀರು ಇರುತ್ತದೆ. ಎರಡು ದುಡ್ಡು ಹೆಚ್ಚು ಕಡಮೆ ಬರೆದದ್ದು ಇರುತ್ತದೆ. ಇವೆಲ್ಲಾ ರೆಕ್ಟಿಫೈಮಾಡಿಕೊಳ್ಳಿರಿ ಎಂದು ರಿಜಿಸ್ಟ್ರಾರ್ ಅವರಿಂದ ಅಪ್ಪಣೆ ಬರುತ್ತದೆ. ನಾವು ರೆಕ್ಟಿಫೈಮಾಡುವುದು ಫಾರ್ಮಲ್ ಆಗಿ ಇರುತ್ತದೆ. ಎರಡು ರೂಪಾಯಿ ಹೆಚ್ಚು ಕೊಟ್ಟಿದ್ದೀರಿ ಗಿರಾಕಿಯಿಂದ ವಸೂಲುಮಾಡಬೇಕು ಎಂದು ಆಡಿಟ್ ಮೆಮೋ ಮೂಲಕ ಡೈರೆಕ್ಷನ್ ಕೊಟ್ಟಿದ್ದರೂ ಕೂಡ ಎರಡು ರೂಪಾಯಿಗಳನ್ನು ವಸೂಲು ಮಾಡದಿದ್ದರೆ ಆಗ ನಾನು punishable under section 109 ಎಂದರೆ ತೊಂದರೆಯಾಗುತ್ತದೆ. "Any direction given" ಎಂದು ಇಲ್ಲಿ ಸಾಮಾನ್ಯವಾಗಿ ಸೆಕ್ಷನ್ ಇರುತ್ತದೆ. ಆರೀತಿ ಇರುವುದು ನನಗೆ ಒಪ್ಪಿಗೆ ಇಲ್ಲ. ಡೈರೆಕ್ಷನ್ ಕೊಡಬಹುದು. ಪ್ರತಿಯೊಂದು ಡೈರೆಕ್ಷನ್ failure to observe ಆದರೆ ಪನಿಷಬಲ್ ಎನ್ನತಕ್ಕದ್ದು ಸರಿಯಲ್ಲ.

(ಶ್ರೀ ಎಂ. ಆರ್. ಪಾಟೀಲ್)

ಇನ್ನು ಕಲಮ್ 71. ಸೆಟ್ಲಮೆಂಟ್ ಆಫ ಡಿಸ್‌ಪ್ಯೂಟ್ಸ್‌ಗೆ ಸಂಬಂಧಪಟ್ಟದ್ದು. ಯಾವುದೇ ಸರ್ಕಾರಿ ಮತ್ತು ಸಹಕಾರ ಸಂಸ್ಥೆಗಳ ನಡುವೆ ಡಿಸ್‌ಪ್ಯೂಟ್ ಬಂದರೆ ರಿಜಿಸ್ಟ್ರಾರ್ ಅಥವಾ ಅವರ ನಾಮಿನಿಯು ತೀರ್ಮಾನಕ್ಕೆ ಬಿಡುವುದು ಮುಂಬೈನಲ್ಲಿ ಇದ್ದೇ ಇತ್ತು. ಮುಂಬೈನಲ್ಲಿ ಯಾವನೇ ಒಬ್ಬನು ಆರ್ಬಿಟ್ರೇಷನ್‌ಬೇಕು ಎಂದು ಸೂಚನೆಮಾಡಿದರೆ ಅದನ್ನು ಆರ್ಬಿಟ್ರೇಷನ್ ಆಫ್ ತ್ರಿ ಆಫೀಸರ್ಸ್‌ಗೆ ಒಪ್ಪಿಸಬೇಕೆಂದು ಇತ್ತು. ಒಬ್ಬರು ಸೊಸೈಟಿ ಪರ ಮತ್ತೊಬ್ಬರು ಕಕ್ಷಿಗಾರರ ಪರ ಮತ್ತು ಇನ್ನೊಬ್ಬರು ರಿಜಿಸ್ಟ್ರಾರ್‌ರ ನಾಮಿನಿ, ಈ ಮೂರು ಜನರನ್ನು ಒಳಗೊಂಡ ಆರ್ಬಿಟ್ರೇಷನ್ ಬೋರ್ಡ್‌ಮಾಡ ಬೇಕೆಂದು ಕಾಯಿದೆ ಮಾಡಿದ್ದರು. ಅದರ ಪರಿಣಾಮ ವಾಗಿ ಯಾವ ವ್ಯಾಜ್ಯಗಳೂ ನಿರ್ಣಯ ಆಗಿಲ್ಲ. ಯಾರೊಬ್ಬರ ಚೌಕಾಸಿಯಿಂದ ಆರ್ಬಿಟ್ರೇಟರ್ ಗೈರು ಹಾಜರಿ ಇರಬಹುದು. ಈ ರೀತಿ ಇದ್ದುದರಿಂದ ಮೂರು ನಾಲ್ಕು ವರ್ಷಗಳಿಂದ ಯಾವ ಕೇಸೂ ನಿರ್ಣಯ ವಾಗಿಲ್ಲ. ಆದ್ದರಿಂದ ಮುಂಬೈ ಸರ್ಕಾರದವರು 1946ನೆಯ ಇಸ್ವಿಯಲ್ಲಿ ಅದನ್ನು ಪೂರ್ಣವಾಗಿ ತೆಗೆದು ಹಾಕಿಬಿಟ್ಟರು. ರಿಜಿಸ್ಟ್ರಾರ್ ಅಥವಾ ಅವರ ನಾಮಿನಿ ಡಿಸೈಡ್ ಮಾಡತಕ್ಕದ್ದು. ಅವರ ನಿರ್ಣಯದ ಮೇಲೆ, ಅಪೀಲು ಹಾಕಬೇಕಾದರೆ ಒಂದು ಟ್ರಿಬ್ಯುನಲ್‌ಗೆ ಅಪೀಲು ಹೋಗುವುದು ಎಂದು ಸರಳವಾಗಿ ಮಾಡಿ ದರು. ಮುಂಬೈನಲ್ಲಿದ್ದ ಹಳೆಯ ಕಾನೂನನ್ನೇ ಇಲ್ಲಿ ಅಡಾಪ್ಟ್‌ಮಾಡಿದ ಹಾಗೆ ಕಾಣುತ್ತದೆ. ಮುಂಬೈ ಸರ ಕಾರದವರು ಇದು ಯೋಗ್ಯವಲ್ಲ ಎಂದು ಡಿಲೀಟ್ ಮಾಡಿದ ಕ್ಲಾಜುಗಳನ್ನೆಲ್ಲಾ ಇಲ್ಲಿ ಹಾಕಿ ಇದ್ದಾರೆ. ಆದ್ದರಿಂದ ಮೂರುಜನರ ಆರ್ಬಿಟ್ರೇಷನ್ ಎನ್ನುವುದನ್ನು ಇಲ್ಲಿ ತೆಗೆದುಹಾಕಬೇಕು. ರಿಜಿಸ್ಟ್ರಾರ್ ಅಥವಾ ಅವರ ನಾಮಿನಿ ಡಿಸೈಡ್‌ಮಾಡತಕ್ಕದ್ದು. ಅದು ಸರಿಯಿಲ್ಲ ದಿದ್ದರೆ ಟ್ರಿಬ್ಯುನಲ್‌ಗೆ ಅಪೀಲ್‌ಮಾಡುವುದು. ಹೀಗೆ ಮಾಡದಿದ್ದರೆ ಸರ್ಕಾರದಲ್ಲಿ ಯಾವ ವ್ಯಾಜ್ಯವೂ ನಿರ್ಣಯ ಆಗುವುದಿಲ್ಲ ಎನ್ನುವುದನ್ನು ನಾವು ಅರಿಯ ಬೇಕು. 106 (3)ನೆಯ ಕಲಮ್‌ನಲ್ಲಿ ಪಾರ್ಟೀಸ್ ಇನ್ ಡಿಸ್‌ಪ್ಯೂಟ್ಸ್ ವಿಚಾರ ಇದೆ. ಒಬ್ಬರದು ನ್ಯಾಯ ವಾಗಿ ಇದ್ದರೆ ಇನ್ನೊಬ್ಬರದು ಅನ್ಯಾಯವಾಗಿ ಇರು ತ್ತದೆ. ಯಾವ ಪಾರ್ಟಿಗೆ ವಿರೋಧ ಆಗುತ್ತದೋ ಅವನು ಆರ್ಬಿಟ್ರೇಟರ್ಸ್ ನೇಮಿಸಬೇಕು ಎಂದು ಹೇಳು ತ್ತಾನೆ. ಆರ್ಬಿಟ್ರೇಟರ್ಸ್ ನೇಮಿಸಬೇಕು ಎಂದು ಕೇಳಿದ ಕೂಡಲೇ ಈ ಸೆಕ್ಷನ್ ಪ್ರಕಾರ ಆರ್ಬಿಟ್ರೇಟರ್ಸ್ ನೇಮಿಸಬೇಕು.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ರಿಜಿಸ್ಟ್ರಾರ್‌ರವರಿಂದ ನ್ಯಾಯ ದೊರೆಯದಿದ್ದರೆ ಏನು ಮಾಡಬೇಕು ?

ಶ್ರೀ ಎಂ. ಆರ್. ಪಾಟೀಲ್.—ರಿಜಿಸ್ಟ್ರಾರ್‌ಅವ ರಿಂದ ನ್ಯಾಯ ದೊರೆಯದಿದ್ದರೆ ಅವರ ಮೇಲ್ಪಟ್ಟು ಟ್ರಿಬ್ಯುನಲ್ ಇರುತ್ತದೆ, ಅವರಲ್ಲಿ ಅಪೀಲ್‌ಮಾಡಿಕೊಳ್ಳ ಬಹುದು ಅದು ಸಾಕಷ್ಟು ಪ್ರೊಟೆಕ್ಷನ್ ಕೊಡು ತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಎ. ಎಸ್. ಪಾಟೀಲ್.—ಆಗ ವಕೀಲರು ಇರು ವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ. ಆರ್. ಪಾಟೀಲ್.—ಯಾವುದೋ ಸೊಸೈಟಿ ಮತ್ತು ಸರ್ಕಾರದವರ ನಡುವೆ ಡಿಸ್‌ಪ್ಯೂಟ್ ಬಂದರೆ ವಕೀಲರ ಸಂರಕ್ಷಣೆ ಇಲ್ಲ ಎಂದು ಮಾನ್ಯ ಸದ ಸ್ಯರು ಹೇಳಿದರು. ನನ್ನ ಅಭಿಪ್ರಾಯದ ಪ್ರಕಾರ ವಕೀಲರ ಸಹಾಯ ತೆಗೆದುಕೊಳ್ಳುವುದಕ್ಕೆ ಪ್ರತಿ ಬಂಧಕಮಾಡಬಾರದು. ವಕೀಲರು ಹಾಜರು ಆಗು ವುದಕ್ಕೆ ಅಡ್ಡಿಯಿಲ್ಲ. We can make a provision; I have no objection. ನಾನು ತಮ್ಮ ವೇಳೆಯನ್ನು ಹೆಚ್ಚಿಗೆ ತೆಗೆದುಕೊಂಡಿದ್ದೇನೆ ಎಂದು ಎನಿಸುತ್ತದೆ. ಆದ್ದರಿಂದ ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ನಮ್ಮ ಸನ್ಮಾನ್ಯ ಮಿತ್ರರಾದ ಶ್ರೀ ಎಂ. ಆರ್. ಪಾಟೀಲ್‌ಅವರು ಮಾತ ನಾಡುತ್ತಾ ಮುಂಬೈ ಪ್ರಾಂತದಲ್ಲಿ ಸಹಕಾರ ಚಳ ವಳಿ ಯಾವರೀತಿ ಮುಂದುವರಿದಿದೆ ಎನ್ನುವ ವಿಷಯ ವನ್ನು ಹೇಳಿದರು. ಮತ್ತು ಅವುಗಳಲ್ಲಿರುವ ಕೆಲವು ಲೋಪದೋಷಗಳನ್ನು ತಿದ್ದುಪಡಿ ಮಾಡುವುದಕ್ಕಾಗಿ ಈಗ ನಮ್ಮ ಮುಂದೆ ಇರುವ ಸಹಕಾರ ಕಾಯಿದೆ ರೂಪಿತವಾಗಿದೆ ಎಂದು ಕೆಲವೊಂದು ಮಾತುಗಳನ್ನು ಆಡಿದ್ದಾರೆ. ನಾನು ಈ ಸಭೆಯ ಬಹಳ ವೇಳೆಯನ್ನು ತೆಗೆದುಕೊಳ್ಳದೆ ಈ ಕಾಯಿದೆಯಲ್ಲಿರುವ ಕೆಲವು ಲೋಪ ದೋಷಗಳನ್ನು ತಮ್ಮ ಮುಂದೆ ಇಡುವುದಕ್ಕೆ ಈಗ ಎದ್ದು ನಿಂತಿದ್ದೇನೆ. ಮೊದಲನೆಯದಾಗಿ ಸಹಕಾರ ಚಳವಳಿಯ ಬಗ್ಗೆ ಕೆಲವೊಂದು ಮಾತುಗಳನ್ನು ಹೇಳ ಬೇಕೆಂದರೆ ಹಳ್ಳಿಯ ಬಡ ರೈತನಿಗೆ ಆರ್ಥಿಕ ಸಹಾಯ ಒಮ್ಮೆಲೇ ಸಿಕ್ಕಲಿ, ಬಂಡವಾಳಷಾಹಿ ಸಂಸ್ಥೆಯಿಂದ ಸಹಾಯ, ಸಾಲ ಸಿಕ್ಕುವುದು ಬೇಡ, ಸ್ವಂತ ಷೇರ್ ಬಂಡವಾಳದಿಂದಲಾಗಲಿ ಸರ್ಕಾರದಿಂದಲಾಗಲಿ ಸಹಾಯವನ್ನು ತೆಗೆದುಕೊಂಡು ಸ್ವಂತ ಕಾಲಿನ ಮೇಲೆ ನಿಲ್ಲುವಂತೆ ಆರ್ಥಿಕ ಸಹಾಯ, ಸಂಘ ಸಂಸ್ಥೆಯಿಂದ ಆಗಬೇಕು ಎಂದು ಸಹಕಾರ ತತ್ವ ಮತ್ತು ನೀತಿ ಏನಿದೆ ಇದನ್ನು ಕೂಡಿದ ಕಾಯಿದೆ 1904ನೆಯ ಇಸ್ವಿ ಯಲ್ಲಿ ಮೊಟ್ಟ ಮೊದಲು ಜಾರಿಗೆ ಬಂತು. 1912ನೆಯ ಇಸ್ವಿಯೊಳಗೆ ಸಹಕಾರ ಬ್ಯಾಂಕುಗಳು ಮುಂದುವರಿ ಯುತ್ತಾ ಬಂದುವು. ಅನಂತರ ಅವು ಕರಡು ಬಿದ್ದು ಅವು ಹೊರಟುಹೋಗಿ ಬೇರೆ ಸಂಘಗಳು ಅಸ್ತಿತ್ವಕ್ಕೆ ಬಂದುವು. 1905ನೆಯ ಇಸ್ವಿಯಲ್ಲಿ ಧಾರ್ವಾಡ ಜಿಲ್ಲೆ ಯೊಳಗೆ ಕಣಗಿನಹಾಳ ಎಂಬ ಊರಿನಲ್ಲಿ ಮೊದಲನೆಯ ಸಹಕಾರ ಸಂಘ ಸ್ಥಾಪಿತವಾಯಿತು. ಮೊದಲು ಅದಕ್ಕೆ ಎಂಟ್ಪತ್ತು ಜನ ಮೆಂಬರುಗಳು ಮಾತ್ರ ಇದ್ದರು. ಸಹಕಾರ ಸಂಸ್ಥೆಗಳು ನಮ್ಮ ಜಿಲ್ಲೆ ಯೊಳಗೆ ಬೆಳೆದು ಬಹಳ ಉನ್ನತಮಟ್ಟವನ್ನೇರಿವೆ. ನಮ್ಮ ಧಾರವಾಡ ಕರ್ಣಾಟಕ ಕೋ-ಅಪರೇಟಿವ್ ಸೆಂಟ್ರಲ್ ಬ್ಯಾಂಕ್—ನಮ್ಮ ಎಪೆಕ್ಸ್ ಬ್ಯಾಂಕ್‌ಗಿಂತ ಹೆಚ್ಚು ದುಡಿಯುವ ಬಂಡವಾಳ ಇದ್ದ ಸಂಸ್ಥೆ ಆಗಿದೆ. ಸದ್ಯಕ್ಕೆ ಅದರ ದುಡಿಯುವ ಬಂಡವಾಳ 3½ ಕೋಟಿ ಇದೆ. ಆದ್ದರಿಂದ ನಮ್ಮ ಮೈಸೂರು ಸಂಸ್ಥಾನದಲ್ಲಿ ಸಹಕಾರ ಸಂಸ್ಥೆಗಳು ಎಷ್ಟು ಬೆಳೆಯಬೇಕು ಎಂಬುದು ಒಂದು ಮಹತ್ವದ ಸಂಗತಿಯಾಗಿದೆ. ನಮ್ಮ ಕೇಂದ್ರ ಸಂಸ್ಥೆಗಳು ಬೆಳೆಯಬೇಕಾದರೆ ಸರ್ಕಾರದವರ ಸಹಾಯ ಜನರ ಸಹಾಯ ಬೇಕಾಗುತ್ತದೆ. ನಮ್ಮ ಮಿತ್ರರು ಹೇಳಿದರು ಸರ್ಕಾರದ ಸಹಾಯಬೇಕು, ಸ್ಟೇಟ್ ಪಾಲುಗಾರಿಕೆಬೇಕು ಎಂದು ಹೇಳಿದರು ಇದು ಯಾತಕ್ಕೆ ಬಂತು ಎಂಬುದನ್ನು ಕೆಲವೊಂದು ಮಾತಿನಲ್ಲಿ ಸಂಕ್ಷಿಪ್ತವಾಗಿ ಹೇಳುವುದಾದರೆ, ಗ್ರಾಮಾಂ ತರ ಪರಿಶೀಲನಾ ಸಮಿತಿಯವರು ಬಡ ರೈತರಿಗೆ ಅವರ ವರದಿಯಲ್ಲಿ, ಅವರ ಸಾಲದ ಬೇಡಿಕೆಯಲ್ಲಿ 100ಕ್ಕೆ 3ರಂತೆ ಸರ್ಕಾರದ ಮುಖಾಂತರ ಮುಟ್ಟಿದೆ ಎಂದು ಹೇಳಿದ್ದಾರೆ. ಅದೇ ಸಮಿತಿಯವರ ಸಹಕಾರ ಸಂಘಗಳು ಪ್ರಗತಿಪರವಾಗಿ ಬೆಳೆದಂತೆ ಮುಂಬೈ

ಪ್ರಾಂತದಲ್ಲಿ 100ಕ್ಕೆ 16ರಂತೆ ಸಿಕ್ಕುತ್ತದೆ ಎಂದು ಅಂಕಿ ಸಂಖ್ಯೆಯ ಮೇಲೆ ಹೇಳಿದ್ದಾರೆ.

[MR. SPEAKER in the Chair.]

ಆದರೂ ಇಡೀ ಭಾರತದೊಳಗೆ ಸರ್ಕಾರದವರ ಷೇರು ಮೊಬಲಗು ಸಹಕಾರ ಸಂಘಗಳಲ್ಲಿರಬೇಕು. ಸಾಮಾನ್ಯವಾಗಿ ಅವರು ಶೇಕಡ 51 ರಂತೆ ಷೇರು ಹಣ ಕೊಡಬೇಕು. ಅವರು ಕಂಟ್ರಿಬ್ಯೂಟ್ ಮಾಡಬೇಕು ಎಂಬ ಅಂಶವನ್ನು ಗ್ರಾಮಾಂತರ ಪರಿಶೀಲನಾ ಸಮಿತಿಯವರು ಹೇಳಿದ್ದಾರೆ ಗ್ರಾಮಾಂತರ ಪರಿಶೀಲನಾ ಸಮಿತಿಯವರು ಇದನ್ನು ಬೆಳೆಸುವುದೂ ಒಂದು, ಅಂದರೆ ಸಾಕಷ್ಟು ಷೇರು ಬಂಡವಾಳ ಕೊಡಬೇಕು, ಹಣ ಸಂಗ್ರಹಣಮಾಡಬೇಕು, ಆರ್ಥಿಕ ಸಹಾಯ ಯಾವರೀತಿ ಸಿಕ್ಕಬಹುದೆಂದು ವಿಚಾರ ಮಾಡಬೇಕು. ರೈತರಿಗೆ ಹಿಡುವಳಿಯನ್ನು ಗೊತ್ತು ಮಾಡುವ ಕಾಲಕ್ಕೆ ಅವರಿಂದ ಸಹಾಯ ಪಡೆಯಬೇಕು. ಇದಲ್ಲದೆ ಬೇರೆ ತರಹ ಸಂಘಗಳು ಔದ್ಯೋಗಿಕ ಸಹಾಯ ಮಾಡಬೇಕು. ನಮ್ಮ ಇಂಡಿಯಾ ಸರ್ಕಾರದವರಿಂದ ರೂಪಿತವಾದಂಥ ಸಹಕಾರ ಕಾಯಿದೆಯನ್ನು ನಮ್ಮ ರಾಜ್ಯ ಸರ್ಕಾರದವರು ಪರಿಗಣಿಸಿ ಕೆಲವೊಂದು ಕಾಯಿದೆಗಳನ್ನು ಬಹುಬೇಗ ಜಾರಿಯಲ್ಲಿ ತರಬೇಕೆಂದು ಮತ್ತು ನಮ್ಮ ರಾಜ್ಯದ ಐದು ಭಾಗಗಳಲ್ಲಿಯ ಸಹಕಾರ ಕಾಯಿದೆಗಳನ್ನು ಸಮನ್ವಯಗೊಳಿಸಲು ಸದ್ಯದ ಮೈಸೂರು ಸಹಕಾರ ಸಂಘದ ಬಿಲ್ಲನ್ನು ಅಸೆಂಬ್ಲಿ ಎದುರು ತರಲಾಗಿದೆ. ಈ ಕಾಯಿದೆಯ ಕೆಲವೊಂದು ಕಲಮುಗಳನ್ನು ಇಲ್ಲಿ ವಿವರಿಸಬೇಕಾಗಿದೆ. ಈಗ ಡೆಫಿನಿಷನ್ಸ್ ಒಳಗೆ ಕೆಲವೊಂದು ಡೆಫಿನಿಷನ್ಸ್ ಬಂದಿಲ್ಲವೆಂದು ನನಗನ್ನಿಸುತ್ತದೆ. ಉದಾಹರಣೆಗೆ ಆರ್‌ಬಿಟ್ರೇಟರ್, ಸೆಟಲ್‌ಮೆಂಟ್ ಆಫ್ ಡಿಸ್‌ಪ್ಯೂಟ್. ಆರ್‌ಬಿಟ್ರೇಟರ್ ಯಾರೆಂಬುದನ್ನು ಇದರಲ್ಲಿ ಡಿಫೈನ್ ಮಾಡಬೇಕು. ಅದರಂತೆಯೇ ಆಡಿಟರ್ ಯಾರು ಸ್ಟೇಟ್‌ಗೌರ್ನ್‌ಮೆಂಟ್ ಆಡಿಟರೇ ಅಥವಾ ಕೇಂದ್ರ ಬ್ಯಾಂಕಿನ ಆಡಿಟರೇ, ಡಿವಿಡೆಂಡ್ ಎಂದರೇನು—ಇವೆಲ್ಲದರ ಡಿಫಿನಿಷನ್ಸ್ ಕ್ಲಿಯರಾಗಿ ಇರಬೇಕು. ಇದಲ್ಲದೆ ಸೊಸೈಟಿಗಳ ಕ್ಲಾಸಿಫಿಕೇಷನ್ ಇದರಲ್ಲಿಲ್ಲ. ಕನ್‌ಸ್ಯೂಮರ್ಸ್ ಸೊಸೈಟಿ, ಫೆಡರಲ್ ಸೊಸೈಟಿ, ಅಗ್ರಿಕಲ್ಚರಲ್ ಸೊಸೈಟಿ, ಫಾರ್ಮರ್ಸ್ ಸೊಸೈಟಿ, ಕ್ರೆಡಿಟ್ ಹೌಸಿಂಗ್ ಸೊಸೈಟಿ, ಮಾರ್ಕೆಟಿಂಗ್ ಸೊಸೈಟಿ— ಇವೆಲ್ಲವುಗಳ ವ್ಯಾಖ್ಯೆ ಇದರಲ್ಲಿ ಮಾಡುವುದು ತಪ್ಪೇನಿಲ್ಲ. ಸರ್ಕಾರದಿಂದ ಇವೆಲ್ಲಕ್ಕೂ ಸಹಾಯ ಪಡೆಯಬಹುದು. ಅದರಂತೆಯೇ ವರ್ಕಿಂಗ್ ಕ್ಯಾಪಿಟಲ್ ಬಗ್ಗೆ ವ್ಯಾಖ್ಯೆ ಇಲ್ಲ. ಟ್ರಿಬ್ಯುನಲ್ ಬಗ್ಗೆ ವ್ಯಾಖೆ ಇದೆ. ಇದರ ವಿಷಯವನ್ನು ಕಡೆಯಲ್ಲಿ ಹೇಳುತ್ತೇನೆ. ಇದರೊಳಗೆ ಪ್ರತ್ಯೇಕ Co-operative Tribunal ಇರಬೇಕು, ರೆವಿನ್ಯೂ ಟ್ರಿಬ್ಯೂನಲ್ಸ್ ಸಹ ಈ ಕೋಆಪರೇಟಿವ್ ಅಪೀಲ್ಸನ್ನು ವಿಚಾರಮಾಡುವ ಅವಕಾಶವಿರಬೇಕೆಂದು ಕಾಯಿದೆಯಲ್ಲಿ ರಚಿಸಲಾಗಿದೆ. ಮುಂಬೈನಲ್ಲಿರುವಹಾಗೆ ಒಂದು ಕೋ–ಆಪರೇಟಿವ್ ಟ್ರಿಬ್ಯೂನಲ್ ಪ್ರತ್ಯೇಕ ಇಲ್ಲಿಯೂ ಏರ್ಪಾಡು ಮಾಡಬೇಕೆಂದು ನನ್ನ ಸೂಚನೆ.

ಇನ್ನು 13ನೆಯ ಸೆಕ್ಷನ್ನಿನ ಬಗ್ಗೆ ಮಾನ್ಯಮಿತ್ರರಾದಂಥ ಶ್ರೀ ಎಂ. ಆರ್. ಪಾಟೀಲ್ ಅವರು ಬಹಳವಾಗಿ ಹೇಳಿದರು. ಅವರು ಹೇಳಿದಹಾಗೆ ಸೆಕ್ಷನ್ 13 ಕ್ಲಾಜ್ ಎರಡನೆಯದನ್ನು ತಪ್ಪದೆ ತೆಗೆದುಹಾಕಬೇಕು. ಈ ಸೆಕ್ಷನ್ 13 (2) ರಿಜಿಸ್ಟ್ರಾರರಿಗೆ ಸರ್ವಾಧಿಕಾರವನ್ನು ಕೊಡುವುದು ಪ್ರಜಾಪ್ರಭುತ್ವ ತತ್ವಕ್ಕೇ ಅಗದೀ ವಿರುದ್ಧವಾಗಿದೆ. ಗ್ರಾಮಾಂತರ ಪರಿಶೀಲನಾ ಸಮಿತಿಯವರು ಸಣ್ಣ ಸಣ್ಣ ಸಂಘಗಳನ್ನು ಅಮಾಲ್ಗಮೇಟ್‌ಮಾಡಿ ಒಂದು ದೊಡ್ಡ ವಿವಿಧೋದ್ದೇಶ ಸಂಘವನ್ನಾಗಿ ಏರ್ಪಡಿಸುವುದಕ್ಕೆ (ನೋ ಈ ಮಸೂದೆಯಲ್ಲಿ ಅನುವುಮಾಡಲಾಗಿದೆ. ಇದಕ್ಕಾಗಿ ಹಿಂದೆ ರಿಜಿಸ್ಟ್ರಾರ್ ಆಗಿದ್ದ ದಿವಂಗತ ಶ್ರೀ ಬಿ. ಎ. ಪಾಟೀಲ್ ಅವರು ಈ ಬಗ್ಗೆ ಹೇಳಿರುವ ಪ್ರಕಾರ ವಿಚಾರಮಾಡಿ ಸೆಕ್ಷನ್ 13 (2) ನೆಯದನ್ನು ಮಸೂದೆಯಲ್ಲಿ ಸೇರಿಸಿದ್ದಾರೆಂದು ಹೇಳುತ್ತೇನೆ. ಅಲ್ಲದೆ ಆ ಮಹನೀಯರು ಹೇಳಿದ ಪ್ರಕಾರ ಇಲ್ಲಿ ಜಾರಿಗೆ ತಂದಿದ್ದಾರೆಂದು ನನಗನ್ನಿಸುತ್ತದೆ. ಆದರೆ ನಿಜವಾಗಿಯೂ ಆ ಪ್ರಸಂಗ ಇಲ್ಲಿ ಬರುವುದಿಲ್ಲ. ಈಗ ದೊಡ್ಡದಾಗಿ ಮಲ್ಟಿಪರ್ಪಸ್ ಸೊಸೈಟಿ ಕಟ್ಟುವುದು ಸರಿಯಿಲ್ಲ. ಮೊನ್ನೆ ಕೋಆಪರೇಟಿವ್ ಕಾಂಗ್ರೆಸ್ ದೆಹಲಿಯಲ್ಲಿ ನಡೆಯಿತು. ಆ ಕಾಂಗ್ರೆಸ್ ಅಧಿವೇಶನದಲ್ಲಿ ನಡೆದ ವಿಚಾರಗಳ ಪೈಕಿ ಈಸಾರಿ ಕೇಂದ್ರ ಸರ್ಕಾರದಿಂದ ಈ ಬಗ್ಗೆ ಸಹಾಯ ಒದಗುತ್ತದೆಂಬುದಕ್ಕೆ ಮಾನ್ಯ ಪಂಡಿತ ಜವಹರ್‌ಲಾಲ್‌ನೆಹರೂ ಅವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಮಾತುಕತೆಗಳನ್ನು ನಡೆಸಿದ್ದಾರೆ. ಆ ಪ್ರಕಾರ ನಮಗೆ ಸಹಾಯವಾಗುವುದರಲ್ಲಿ ಏನೂ ಸಂಶಯವಿಲ್ಲ. 20 ಮೈಲಿ ರೇಡಿಯಸ್‌ನೊಳಗೆ ಒಂದು ಸೊಸೈಟಿ ಮಾಡುವುದು ಸರಿಯಲ್ಲ. ಆದ್ದರಿಂದ ರಿಜಿಸ್ಟ್ರಾರ್‌ರವರಿಗೆ 13 (2) ಸೆಕ್ಷನ್ ಪ್ರಕಾರ ಕೋಆಪರೇಟಿವ್ ಸೊಸೈಟಿಗಳ ಅಮೆಂಡ್‌ಮೆಂಟ್ ಬೈಲಾಗಳನ್ನು ತಯಾರುಮಾಡುವ ಕ್ರಮ ಸರಿಯಲ್ಲ. ಎಲ್ಲಾ ಬೈಲಾಗಳನ್ನೂ ಸಮನ್ವಯಗೊಳಿಸಿ ಪ್ರಜಾಪ್ರಭುತ್ವದ ರೀತಿ ಒಂದೇ ರೀತಿಯಾದ ಕಾಯಿದೆಗಳನ್ನು ಮಾಡದೇ ಇದ್ದರೆ ಅದು ಸರಿಯಾಗಿರುವುದಿಲ್ಲ.

ಇನ್ನು ಸೆಕ್ಷನ್ 25 ಪ್ರಕಾರ ಟ್ರಾನ್ಸ್‌ಫರ್ ಆಫ್ ಇಂಟರೆಸ್ಟ್ ಆನ್ ಡೆಟ್ ಆಫ್ ಮೆಂಬರ್ ಈ ಬಗ್ಗೆ ಕೋರ್ಟಿನಿಂದ ಸಕ್ಸೆಷನ್ ಸರ್ಟಿಫಿಕೇಟನ್ನು ಹಣ ಕೋರ್ಟಿಗೆ ಕೊಡುವುದಕ್ಕೆ ಮುಂಚಿತವಾಗಿ ಪಡೆಯುವಂತೆ ಈ ಮಸೂದೆಯಲ್ಲಿ ಒಂದು ಕ್ಲಾಜನ್ನು ಅಳವಡಿಸಬೇಕು. ಯಾರಾದರೂ ಒಬ್ಬರು ಹಣವನ್ನು ಮತ್ತೊಬ್ಬರಿಗೆ ಸಂದಾಯಮಾಡುವ ಪ್ರಸಂಗ ಬರುತ್ತದೆ. ಆಗ ಸಕ್ಸೆಷನ್ ಸರ್ಟಿಫಿಕೇಟ್ ಕೋರ್ಟಿನೊಳಗೆ ಕೊಡುವ ಹಾಗೆ ಮಾಡಬೇಕು. ಅವಶ್ಯಬಿದ್ದಲ್ಲಿ ಕೋರ್ಟಿನಿಂದಲೇ ಸರ್ಟಿಫಿಕೇಟನ್ನು ತೆಗೆದುಕೊಳ್ಳಬೇಕು. ಇದರಲ್ಲಿ ಕೋರ್ಟಿನ ಸರ್ಟಿಫಿಕೇಟು ಇಲ್ಲದಹೊರತು ದುಡ್ಡು ಕೊಡುವುದಿಲ್ಲ ಎಂಬ ಅಂಶವನ್ನು ಸೇರಿಸಬೇಕು. ಸೆಕ್ಷನ್ 30 ನೆಯದರನ್ವಯ ಒಂದು ಮ್ಯಾನೇಜಿಂಗ್ ಕಮಿಟಿಯನ್ನು ರಚಿಸಿ ಅದರಲ್ಲಿ ಸರ್ಕಾರದಿಂದ ನೇಮಿತರಾದ ಮೂರು ಮಂದಿ ನಾಮಕರಣ ಸದಸ್ಯರಿರುವುದು ಅತಿ ಜರೂರಾಗಿದೆ. ಸರ್ಕಾರದವರಿಂದ ಹಣಸಹಾಯವನ್ನು ಈ ಕಮಿಟಿಯವರು ಪಡೆಯುವುದರಿಂದ ಸರ್ಕಾರದಿಂದ ನೇಮಿಸಲ್ಪಟ್ಟ ನಾಮಕರಣ ಸದಸ್ಯರು ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕು. ಸರ್ಕಾರ ಹಣಕೊಟ್ಟ ಮೇಲೆ ಇತರ ವ್ಯವಹಾರಗಳನ್ನು ಮಾಡುವಾಗ ಮೂರುಮಂದಿ ಸರ್ಕಾರದವರಿಂದ ನೇಮಿಸಲ್ಪಟ್ಟ ನಾಮಿನೀಸ್ ಇರುವುದು ಅವಶ್ಯಕ. ಇದಕ್ಕೆ ಸರ್ಕಾರದ ಸಹಕಾರವೂ ಮೇಲ್ವಿಚಾರಣೆಯೂ, ಮತ್ತು ಜನರ ಸಹಾಯವೂ ಇರಬೇಕು. ಈ ರೀತಿ ಇದ್ದ ಪಕ್ಷದಲ್ಲಿ ಸೊಸೈಟಿಗಳು ಹಿತದೃಷ್ಟಿಯಿಂದ ಚೆನ್ನಾಗಿ ಕೆಲಸಮಾಡುತ್ತವೆ.

Sri C. J. MUCKANNAPPA (Gubbi).—I rise to a point of order, Sir. The point of order is that there was some change

(SRI C. J. MUCKANNAPPA)

of seats. The Chief Minister of the erst. while State of Mysore was occupying the seat of the Chief Minister today. I do not know whether it amounts to a point of order or privilege. (*Laughter.*)

Mr. SPEAKER.—If the Hon'ble Member does not know that it involves a point of order, he need not have raised it at all.

Sri C. J. MUCKANNAPPA.—We want to learn so many things from the Spaker, Sir. I am talking seriously.

ಶ್ರೀ ಎ. ಎಸ್. ಪಾಟೀಲ್.—ಇನ್ನು 31ನೆಯ ಕಾಲಂ ವಿಚಾರವಾಗಿ ಮಾತನಾಡುತ್ತೇನೆ. ಇದರೊಳಗೆ "he shall be disabled from continuing as a member of the committee of the society" ಎಂದು ಹೇಳಿದ್ದಾರೆ. ಇದರೊಳಗೆ ಯಾರೊಬ್ಬರೂ ನಮ್ಮ ಆಪ್ತರು ಇದ್ದರೆ, as parent and child; as brothers and sisters, ಇತ್ಯಾದಿಗಳನ್ನು ಎಕ್ಸ್‌ಪ್ಲನೇಷನ್‌ನಲ್ಲಿ ಕೊಟ್ಟಿದ್ದಾರೆ. ಅದು ಸರಿಯಾಗಿಲ್ಲ. ಈ ಕಾಲಂನೊಳಗೆ ಜಾಗರೂಕತೆಯಿಂದ ಎಷ್ಟರಮಟ್ಟಿಗೆ ತಿದ್ದುಪಡಿ ಮಾಡಬೇಕೋ ಅಷ್ಟರಮಟ್ಟಿಗೆ ಮಾಡಬೇಕು. ಸಬ್‌ಕ್ಲಾಜ್ (ಬಿ) ಯನ್ನು ತೆಗೆದುಹಾಕಬೇಕು.

ಇನ್ನು 32ನೆಯ ಸೆಕ್ಷನ್ ಇದರಲ್ಲಿರುವ ಸೂಪರ್‌ಸೆಷನ್ ಆಫ್ ಕಮಿಟಿಯ ವಿಷಯವಾಗಿ ಮಾತನಾಡುತ್ತಾ, ಮಾನ್ಯ ಮಿತ್ರರಾದಂಥ ಶ್ರೀ ಎಂ. ಆರ್. ಪಾಟೀಲ್ ಅವರು ರಿಜಿಸ್ಟ್ರಾರ್ ಅವರಿಗೆ ಅಷ್ಟು ಅಧಿಕಾರವಿರಬಾರದು ಎಂಬುದಾಗಿ ಹೇಳಿದರು. ಆದರೂ ರಿಜಿಸ್ಟ್ರಾರ್ ಅವರ ಶಿಫಾರ್ಸಿನ ಮೇಲೆ ಮಾತ್ರ ಸರ್ಕಾರ ತನ್ನ ಅಧಿಕಾರವನ್ನು ಚಲಾಯಿಸಬೇಕು. ಈಗ ಜನತೆ ಒಂದು ಪ್ರಜಾಪ್ರಭುತ್ವದ ಸಹಕಾರ ತಳಹದಿಯ ಮೇಲೆ ಇದೆ. ರಿಜಿಸ್ಟ್ರಾರ್ ಅವರಿಗೆ ಈ ಬಗ್ಗೆ ಹೆಚ್ಚಿನ ಕಂಟ್ರೋಲ್ ಇರಬೇಕು ಎಂದು ಇಲ್ಲಿ ಹೇಳಿದೆ. ಅದು ಬಹಳ ತಪ್ಪು ಎಂದು ನನಗನ್ನಿಸುತ್ತದೆ.

ಡೆಪ್ಯುಟಿ ಕಮಿಷನರೆಂದು ಜಿಲ್ಲೆಗೊಬ್ಬರು ಇಟ್ಟಿದ್ದು ಅವರಿಗೇನೂ ಯೋಗ್ಯ ಅಧಿಕಾರವಿರಕೂಡದೆಂದು ಹೇಳಿದರೆ ಬಹಳ ತಪ್ಪು. ಅಧಿಕಾರವಿಲ್ಲದ ಮೇಲೆ ಅವರು ನೋಡಬೇಕಾದ್ದೇನು? ಯಾವ ರೀತಿಯಲ್ಲಿಯೂ ತಪ್ಪನ್ನು ಹತೋಟಿ ಮಾಡಲು ಶಕ್ತಿಯಿಲ್ಲದ ಮೇಲೆ ಅಧಿಕಾರ ನಡೆಯಿಸುವುದೆಂತು ? ತಾವೇ ಹೇಳಬೇಕು. ರಿಜಿಸ್ಟ್ರಾರರೆನ್ನುವವರು ಒಬ್ಬ ದೊಡ್ಡ ಅಧಿಕಾರಿಗಳು; ಸಾಧಾರಣವಾಗಿ 1,500 ರೂಪಾಯಿಗಳ ಪಗಾರ ಪಡೆಯುತ್ತಿರುವವರು. ಅಂಥವರಿಗೆ ಅಧಿಕಾರ ಕೊಟ್ಟರೆ ಏನೋ ಕಷ್ಟವಾಗುತ್ತದೆಂದು ಭಾವಿಸಿ ಅವರು ಸುಮ್ಮನೆ ನೋಡಿಕೊಂಡು ಹೋಗಲಿ ಎಂದರೇನಾಯಿತು ? ಅವರ ರಿಪೋರ್ಟಿನಿಂದೇನು ಪ್ರಯೋಜನವಾದೀತು ? ಅದೆಲ್ಲೋ ಮೂಲೆಯಲ್ಲಿ ಒತ್ತಟ್ಟಿಗೆ ಬಿದ್ದಿರುತ್ತಿದೆ ಅಷ್ಟೆ. ಸರ್ಕಾರಕ್ಕೆ ಮಾತ್ರ ಸೂಪರ್‌ವಿಜನ್ ಅಧಿಕಾರ ಕೊಟ್ಟು ಬಹಳ ವಿಳಂಬವಾಗಿ ಕೆಲಸವಾಗುತ್ತದೆ.

ಆಮೇಲೆ ಸೂಪರ್‌ಸೆಷನ್ ವಿಚಾರವಾಗಿ ಯೋಗ್ಯ ರೀತಿಯಲ್ಲಿ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೋ-ಆಪರೇಟಿವ್ ಸಂಸ್ಥೆಗಳು ತಪ್ಪುದಾರಿಯಲ್ಲಿ ಹೋಗಿರುವ ಸಂದರ್ಭಗಳು ಬಹಳ ಇವೆ.

ಶ್ರೀ ಡಿ. ದೇವರಾಜ ಅರಸ್.—ಚುನಾಯಿತ ಸದಸ್ಯರುಗಳಿರುವಾಗ ತಪ್ಪುದಾರಿಗೆ ಹೇಗೆ ಹೋಗುತ್ತವೆ ?

ಶ್ರೀ ಎ. ಎಸ್. ಪಾಟೀಲ್.—ಮಾನ್ಯ ದೇವರಾಜ ಅರಸ್‌ರವರಿಗೂ ಕೋ-ಆಪರೇಷನ್ ಆಡಳಿತದ ಬಗ್ಗೆ ಬೇಕಾದಷ್ಟು ಅನುಭವವಿದೆ. ಅವರೂ ನೋಡಿದ್ದಾರೆ. ದುರಾಡಳಿತ ಅನೇಕ ಕಡೆ ಇರುತ್ತದೆ. ಆದ್ದರಿಂದ ರಿಜಿಸ್ಟ್ರಾರ್‌ಅವರಿಗೆ ಇಂಥ ಅಧಿಕಾರ ಕೊಡಬೇಡಿ, ಅವರನ್ನು ಸುಮ್ಮನೆ ಮೇಲೆ ಕುಳ್ಳಿರಿಸಿ ಎಂದು ಮಾನ್ಯ ಸದಸ್ಯರು ಎಂ. ಆರ್. ಪಾಟೀಲರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಂ. ಆರ್. ಪಾಟೀಲ್.—ನಾನು ಹಾಗೆ ಹೇಳಲಿಲ್ಲ ಸ್ವಾಮಿ; ರಿಜಿಸ್ಟ್ರಾರ್‌ರವರಿಗೆ ಯಾವ ಅಧಿಕಾರವೂ ಇರಕೂಡದೆಂದು ನಾನು ಹೇಳಲಿಲ್ಲ. ನಾನು ಹೇಳಿದ್ದನ್ನು ಈ ರೀತಿ ಅರ್ಥ ಮಾಡಕೂಡದು.

ಶ್ರೀ ದೀನದಯಾಳು ನಾಯ್ಡು (ಕಬ್ಬನ್‌ಪೇಟೆ).—ಅವರು ಹೇಳಿದ್ದು, ತಾವು ಹೇಳಿದ್ದನ್ನು ಯಾರೂ misinterpret ಮಾಡಕೂಡದು ಎಂದು.

ಅಧ್ಯಕ್ಷರು.—ಅವರು ಹೇಳದೆ ಇದ್ದ ಮೇಲೆ mis-construe ಅಥವಾ mis-interpret ಮಾಡುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಎ. ಎಸ್. ಪಾಟೀಲ್.—ಹಿಂದೆಯೂ ನಮ್ಮ ಬೊಂಬಾಯಿನಲ್ಲಿ ಸೂಪರ್‌ಸೆಷನ್ ಸಂಬಂಧದಲ್ಲಿ ಒಂದು ಸೂಪರ್‌ಸೆಷನ್ ಕಮಿಟಿಯೊಂದು ಏರ್ಪಾಡು ಮಾಡಿದ್ದರು. ಅವರು ಮಾಡಿದ ರಿಪೋರ್ಟಿನ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದರು. ಇದರಿಂದಾಗಿ ಎಷ್ಟೋ ಕಾಲ ವಿಳಂಬವಾಗುವುದಕ್ಕೆ ಅವಕಾಶವಿತ್ತು. ಈಗ ರಿಜಿಸ್ಟ್ರಾರ್ ಎಂದು on the spot ಒಬ್ಬ ಮುಖ್ಯ ಅಧಿಕಾರಿಯಿರುವಾಗ ಅವರಿಗೆ ಇಂಥ ಯಾವ ಅಧಿಕಾರವನ್ನೂ ಕೊಡದೆ ಸಂಘವನ್ನು ನಡೆಸಿ ಎಂದರೆ ಹೇಗೆ ನಡೆಸುವುದು ? ಅಂಥವರಿಂದ ಸರ್ಕಾರಕ್ಕೆ ತಾನೆ ಏನು ಪ್ರಯೋಜನ ? ಈ ದೃಷ್ಟಿಯಿಂದ ರಿಜಿಸ್ಟ್ರಾರ್‌ಅವರಿಗೆ ಸೂಪರ್‌ಸೆಷನ್ ಅಧಿಕಾರ ಕೊಡುವುದು ಅವಶ್ಯಕ. ಒಂದುವೇಳೆ ಇದರಿಂದ ತೊಂದರೆಯಾಗುತ್ತದೆನ್ನುವುದಾದರೆ 106ನೆಯ ಸೆಕ್ಷನ್‌ನಲ್ಲಿ ಅಪೀಲಿಗೆ ಅವಕಾಶ ಮಾಡಿಯೇ ಇದ್ದಾರೆ. ಮುಂಬಯಿನವರಿಗೆ ಈ ವಿಚಾರ ಗೊತ್ತಿಲ್ಲದೆ ಇಲ್ಲ. ಅಲ್ಲಿ ಸರ್ಕಾರದವರು ಈ ರೀತಿ ಸೂಪರ್‌ಸೀಡ್ ಮಾಡುವ ಅಧಿಕಾರವನ್ನು ತೆಗೆದುಕೊಂಡಿದ್ದರು. ಸಹಕಾರ ಸಂಸ್ಥೆಗಳಲ್ಲಿ ದೊಡ್ಡ ಗೂಳಿಗಳು ಸೇರಿಕೊಂಡಿದ್ದರೆ ಅವುಗಳನ್ನು ತೆಗೆಯುವುದಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲದೆ ಇದ್ದರೆ ಏನು ಮಾಡುವುದು ? ಹೇಗಿದರೂ ರಿಜಿಸ್ಟ್ರಾರ್‌ಅವರ ಆರ್ಡರಿನ ಮೇಲೆ ಸರ್ಕಾರಕ್ಕೆ ಅಪೀಲಿಗೆ ಅವಕಾಶವಿರುವಾಗ ಯಾರಿಗೂ ಏನೂ ತೊಂದರೆಯಾಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ.

ಮುಂದೆ, 33ನೆಯ ಸೆಕ್ಷನ್ ಕೆಳಗೆ ಒಂದು ಉತ್ತಮವಾದ ಉಪ-ಸೆಕ್ಷನ್ ಸೇರಿಸಿದ್ದಾರೆ. ಏನೆಂದರೆ, ಸೊಸೈಟಿಯಲ್ಲಿ ಸರಿಯಾಗಿ ಆಡಳಿತ ನಡೆದಿಲ್ಲ ಅಥವಾ ತಪ್ಪುದಾರಿಯಲ್ಲಿ ಹೋಗುತ್ತಿದೆಯೆಂದು ಗೊತ್ತಾದರೆ, ಅದನ್ನು ಸೂಪರ್‌ಸೀಡ್ ಮಾಡಿ, ಅದರ ದಫ್ತರದ ಚಾರ್ಜ್ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದಾರೆ. ಎಷ್ಟೋ ಸೊಸೈಟಿಗಳಲ್ಲಿ ಸೂಪರ್‌ಸೀಡ್ ಆಗಿ ಆರು ವರ್ಷ ಎಂಟು ವರ್ಷಗಳಾದರೂ ದಫ್ತರ ಕೊಡದೇ ಇರುವ ಸಂದರ್ಭಗಳಿವೆ. ಇದನ್ನು ತಪ್ಪಿಸುವುದಕ್ಕೆ ಉತ್ತಮವಾದ ಏರ್ಪಾಡು ಮಾಡಿದ್ದಾರೆ. ಪೋಲೀಸಿನವರ ಸಹಾಯವನ್ನು ಅಥವಾ ಮ್ಯಾಜಿಸ್ಟ್ರೇಟರ

ಸಹಾಯವನ್ನು ಪಡೆದು ದಫ್ತರವನ್ನು ವಶಪಡಿಸಿಕೊಳ್ಳುವಹಾಗೆ ಮಾಡಿರುವುದು ಯೋಗ್ಯ ರೀತಿಯಾಗಿದೆ.

ಐವತ್ತೆಂಟನೆಯ ಸೆಕ್ಷನ್ನಿನ ಪ್ರಕಾರ ಕೋ-ಆಪರೇಟಿವ್ ಸಹಕಾರ ಪ್ರಚಾರಕ್ಕಾಗಿ ಮತ್ತು ವಿದ್ಯಾಭ್ಯಾಸಕ್ಕಾಗಿ ಒಂದು ಫಂಡನ್ನು ರಚನೆ ಮಾಡುವುದಕ್ಕೆ ಅವಕಾಶ ಮಾಡಿರುವುದು ಅತ್ಯವಶ್ಯಕವಾದದ್ದಾಗಿದೆ. ಕೋ-ಆಪರೇಟಿವ್ ಪ್ರಚಾರಕ್ಕಾಗಿ ಮತ್ತು ಕೋ-ಆಪರೇಟಿವ್ ವಿದ್ಯಾಭ್ಯಾಸಕ್ಕಾಗಿ ಏರ್ಪಾಡು ಮಾಡಬೇಕೆಂಬುದು ಈಗಿನ ಕಾಲದಲ್ಲಿ ಬಹಳ ಅವಶ್ಯಕ. ದ್ವಿತೀಯ ಪಾಂಚ ವಾರ್ಷಿಕ ಯೋಜನೆಯ ಪ್ರಕಾರ ನಮ್ಮಲ್ಲಿ ಸಹಕಾರ ಶಿಕ್ಷಣದ ತರಪೇತಿಗೆ ಸಾಕಷ್ಟು ವ್ಯವಸ್ಥೆ ಮಾಡಬೇಕೆಂಬುದರ ವಿಷಯವನ್ನು ಮಾನ್ಯಮಂತ್ರಿಗಳು ಧಾರವಾಡಕ್ಕೆ ಬಂದಾಗ್ಗೆ ಅವರೇ ಒತ್ತಿ ಹೇಳಿದ್ದಾರೆ. ಮೈಸೂರಿನಲ್ಲಿ ಈಗ ಸಹಕಾರದ ಇನ್‌ಸ್ಟಿಟ್ಯೂಟ್ ಎಂದಿರುವುದು ಈಗ ಅಸ್ತಿತ್ವದಲ್ಲಿದೆಯೆಂದೇ ಹೇಳುವುದಕ್ಕಾಗುವುದಿಲ್ಲ. ಇದರಿಂದಾಗಿ ನಾವು ಬೊಂಬಾಯಿನ ಕಡೆಯವರು ಕೋ-ಆಪರೇಟಿವ್ ರಾಜ್ಯದಲ್ಲಿ ಎರಡು ವರ್ಷ ಹಿಂದಕ್ಕೆ ಹೋದಂತಾಗಿದೆ. ಹೀಗಾಗಿ ನಮ್ಮ ಕಡೆಯ ಅನೇಕ ಕೋ-ಆಪರೇಟಿವ್ ಸಂಸ್ಥೆಗಳಿಗೆ ದೊರಕಬೇಕಾದ ಸಹಾಯ ಧನ ಸಿಕ್ಕದೆ ಹೋಗಿ ಅಲ್ಲಿನ ನೌಕರರು ಸಂಬಳವಿಲ್ಲದೆ ನಿಂತಿದ್ದಾರೆ. ಮಾನ್ಯಮಂತ್ರಿಗಳಿಗೂ ಕೂಡ ಈ ವಿಷಯವನ್ನು ತಿಳಿಸಿದ್ದೇನೆ. ಈ ದೃಷ್ಟಿಯಿಂದ ಕೋ-ಆಪರೇಟಿವ್ ವಿದ್ಯಾಭ್ಯಾಸದ ನಿಧಿಯೆಂದು ಮಾಡಿರುವುದರ ಸೂಕ್ತತೆಯನ್ನು ಒತ್ತಿ ಹೇಳಬೇಕಾಗಿಲ್ಲ. ಇದಕ್ಕಾಗಿ ಸರ್ಕಾರದವರು ಯೋಗ್ಯವಾದ ರೀತಿಯಲ್ಲಿ ಸಹಾಯ ಧನ ಕೊಡಬೇಕೆಂದು ಹೇಳುತ್ತೇನೆ.

'Settlement of disputes' ಎಂಬ ವಿಚಾರದಲ್ಲಿ ಶ್ರೀ ಎಂ. ಆರ್. ಪಾಟೀಲರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. Orbitrationಗೆ ಫೀ ಹಾಕುವುದು ಸರಿಯಲ್ಲ. ಇದಕ್ಕಿಂತ ಕಾಯಿದೆಗಳ ಸಂಬಂಧದಲ್ಲಿ ಸಹಾಯ ಕೊಡುವುದಕ್ಕೆ ವಕೀಲರ ಏರ್ಪಾಡು ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಈಗ ಟೆನೆನ್‌ಸಿ ಕೋರ್ಟಿನಲ್ಲಿ ವಕೀಲರು ಬೇಡವೇ ? ರೈತರಿಗೆ ಕಾಯಿದೆ ವಿಷಯಗಳಲ್ಲಿ ಸಹಾಯ ನೀಡುವುದಕ್ಕೆ ವಕೀಲರು ಬೇಕೇಬೇಕು. ವಕೀಲರೆಂದ ಮಾತ್ರಕ್ಕೇ ಅವರೆಲ್ಲ ತಪ್ಪು ಮಾಡುವವರೆಂದು ಭಾವಿಸುವುದು ಸರಿಯಲ್ಲ. ಅವರುಗಳು ಸರಿಯಾಗಿ ಸಲಹೆ ಕೊಡುವವರು. ಸಾಮಾನ್ಯವಾಗಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಕೆಲವು ವ್ಯಾಜ್ಯಗಳು ಹತ್ತು-ಹದಿನೈದು ರೂಪಾಯಿಗಳವರೆಗಿನವೂ ಇರುತ್ತವೆ. ಅಂಥವುಗಳನ್ನು ಬೇಗ ಪೂರೈಸಬೇಕೆಂದರೆ ವಕೀಲರ ಸಹಾಯವಿಲ್ಲದೆ ನಡೆಸುವುದು ಕಷ್ಟ. ಒಂದುವೇಳೆ ವಕೀಲರುಗಳಿದ್ದರೆ ಕಾಲ ವಿಳಂಬವಾಗುತ್ತದೆಂದು ಭಾವಿಸಿದ್ದರೆ ಎರಡು ತಿಂಗಳು ಅಥವಾ ಮೂರು ತಿಂಗಳೆಂದು ಒಂದು ಕಾಲದ ನಿಗದಿಯನ್ನು ಗೊತ್ತು ಮಾಡಿ. ಆದ್ದರಿಂದ ವಕೀಲರುಗಳಿರುವುದು ಅವಶ್ಯಕವೆಂದು ಹೇಳುತ್ತೇನೆ. ಹಾಗೆಯೇ ವಕೀಲರಿಗೆ ಫೀ ವಗೈರೆ ಕೊಡಬೇಕಾಗುತ್ತದೆ, ಇದರಿಂದ ಬಡ ಜನರಿಗೆ ತೊಂದರೆಯಾಗುತ್ತದೆಂಬ ಕಾರಣದಮೇಲೆ ಹೀಗೆ ಮಾಡುವುದು ಸರಿಯಲ್ಲ. ಥಾಕತ್ತು ಇರುವ ಮನುಷ್ಯನಿದ್ದರೆ ಕೊಡಲಿ. ಇಲ್ಲದಿದ್ದರೆ, ಸರ್ಕಾರದವರೇ ಯಾರಾದರೂ ಆನರರಿ ವಕೀಲರನ್ನು ಬೇಕಾದರೆ ನೇಮಿಸಿ ಬಡ ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನ ವ್ಯವಸ್ಥೆ ಚೆನ್ನಾಗಿದೆ. ನಾನು ನೋಡಿದಂತೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು ಬೊಂಬಾಯಿನಲ್ಲಿದ್ದ ರೀತಿ ಅಷ್ಟು ಚೆನ್ನಾಗಿರಲಿಲ್ಲ. ಹಳೆಯ ಮೈಸೂರಿನಲ್ಲಿದ್ದ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ರೀತಿ ನೀತಿಗಳು ಸರಿಯಾಗಿದ್ದುವು. ಎಲ್ಲಕಡೆಯಲ್ಲೂ ಅದೇರೀತಿ ಮಾಡಬೇಕೆಂದು ಹೇಳುತ್ತೇನೆ.

ಕೆಲವು ತಿದ್ದುಪಡಿಗಳು ಇವೆ. ಅವುಗಳನ್ನು ಈ ಕಾಯಿದೆಯಲ್ಲಿ ಅಡಗಿಸಬೇಕೆಂದು ನನ್ನ ಇಚ್ಛೆ ಇದೆ.

ಇನ್ನೊಂದು ವಿಷಯವೇನೆಂದರೆ, ಹಳೆಯ ಮೈಸೂರಿನಲ್ಲಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಜಮೀನು ಕೊಳ್ಳಲು ಹಣ ಕೊಡಲಿಕ್ಕೆ ಬರುವುದಿಲ್ಲ. ಈ ಹಳೆಯ ಮೈಸೂರಿನ ಕಾಯಿದೆ ನಮಗೆ ಲಾಗು ಮಾಡಿದ್ದಾರೆ.

When a small agricultural labourer wants to purchase land, you can just give him the financial aid.

ಬೊಂಬಾಯಿನಲ್ಲಿ ಹಾಗೆ ಇತ್ತು. ರೈತರು ಹೊಲಗಳನ್ನು ಕೊಳ್ಳಲಿಕ್ಕೆ ಹೋದರೆ, ಅವುಗಳನ್ನು ಒತ್ತೆ ಹಾಕಿಕೊಂಡು ಸಾಲ ಕೊಡುತ್ತಿದ್ದರು. ಏಕೆ ಇಲ್ಲಿ ಕೊಡುವುದಿಲ್ಲವೋ ನನಗೆ ತಿಳಿಯದಾಗಿದೆ. ಅದೇ ಪ್ರಕಾರ ಕೊಡಲಿಕ್ಕೆ ಅಡ್ಡಿ ಇಲ್ಲ.

ಟ್ರಿಬ್ಯುನಲ್ ಬಗ್ಗೆ ಹೇಳಿದ್ದೇನೆ. ಸಹಕಾರದ ಅಪೀಲುಗಳನ್ನು ರೆವಿನ್ಯು ಟ್ರಿಬ್ಯುನಲ್ಲಿಗೆ ಕಳುಹಿಸಿದರೆ ಸಮರ್ಪಕವಾಗಿರುವುದಿಲ್ಲ. ಸಹಕಾರದ ಕಾಯಿದೆಯೊಳಗೆ ತಜ್ಞರಾದವರ ವಿಚಾರ ಬೇರೆ ಇರುತ್ತದೆ. ಮುಂಬೈ ಒಳಗೆ ಈ ವಿಚಾರ ಇತ್ತು. ಆದ್ದರಿಂದ ಪ್ರತ್ಯೇಕವಾದಂಥ ಕೋ-ಆಪರೇಟೀವ್ ಟ್ರಿಬ್ಯುನಲ್ಲಿರಬೇಕೆಂದು ನಾನು ಸೂಚನೆಮಾಡುತ್ತೇನೆ.

ಈ ಕಾಯಿದೆಯನ್ನು ಸಲೆಕ್ಟ್ ಸಮಿತಿಗೆ ಕಳುಹಿಸುವವರಿದ್ದೀರಿ. ಒಂದು ಉತ್ತಮವಾದ ಮತ್ತು ಬಡ ರೈತರಿಗೆ ಸಹಾಯವಾಗತಕ್ಕಂಥ ಕಾಯಿದೆ ರೂಪಿತವಾಗುತ್ತದೆಂದು ಆಶೆಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಡಾ॥ ಆರ್. ನಾಗನಗೌಡ.—ಅಧ್ಯಕ್ಷರೆ, ಸಾಧಾರಣವಾಗಿ ರೈತರಿಗೆ ತಮ್ಮ ವ್ಯವಸಾಯಕ್ಕೆ ಬೇಕಾದಂಥ ಹಣ ಕಾಸು ಸಹಕಾರ ಸಂಘಗಳ ದ್ವಾರ ದೊರೆಯಬೇಕು ಎನ್ನುವ ತತ್ವದಿಂದ, ಕಳೆದ ಮೂರು ವರ್ಷಗಳ ಹಿಂದೆ ಸೆಂಟ್ರಲ್ ಬ್ಯಾಂಕಿನವರು ಒಂದು ರೂರಲ್ ಕ್ರೆಡಿಟ್ ಸರ್ವೆ ಏರ್ಪಾಡುಮಾಡಿ, ಯಾವ ವಿಧವಾಗಿ ರೈತರಿಗೆ ದುಡ್ಡು ಒದಗಿಸಿ ಕೊಡಬಹುದು ಎಂದು ಒಂದು ರಿಪೋರ್ಟ್ ಬರೆದಿದ್ದಾರೆ. ಆ ತರುವಾಯ ಅದನ್ನು ಚಾಲ್ತಿಯಲ್ಲಿ ತರುವುದಕ್ಕೆ ಅನೇಕ ವಿಧವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈಗ ರೈತರಿಗೆ ಬೇಕಾದಂಥ ಹಣದ ಪೈಕಿ ಸಹಕಾರ ಸಂಘಗಳು ಕೇವಲ ಶೇಕಡ ಐದಕ್ಕಿಂತಲೂ ಹೆಚ್ಚು ದುಡ್ಡು ಒದಗಿಸಿಕೊಡುವುದಿಲ್ಲವೆಂದು ಹೇಳಿದರೆ, ಅದು ಅತಿಶಯೋಕ್ತಿ ಆಗಲಿಕ್ಕೆ ಇಲ್ಲ. ತಕಾವಿ ಸಾಲಗಳು, ಲ್ಯಾಂಡ್ ಮಾರ್ಟ್‌ಗೇಜ್ ಸಾಲಗಳು ಮುಂತಾದುವು ಸಹ ವಿಶೇಷ ರೀತಿಯಲ್ಲಿ ಸಹಾಯ ಮಾಡುವುದಿಲ್ಲ. ರೈತನು ಇಂದಿನವರೆಗೂ ತನಗೆ ಬೇಕಾದ ಹಣವನ್ನು ವಿಶೇಷತಃ ಗ್ರಾಮದಲ್ಲಿ ತಿಂಗಳಿಗೆ ನೂರಕ್ಕೆ ಎರಡು ರೂಪಾಯಿನಿಂದ ಹಿಡಿದು, ಮೂರು ನಾಲ್ಕು ರೂಪಾಯಿಗಳವರೆಗೂ ಬಡ್ಡಿ ಕೊಟ್ಟು ಸಾಲವನ್ನು ಸಂಪಾದಿಸಿಕೊಳ್ಳುತ್ತಿದ್ದಾನೆ. ಇನ್ನು ಸಾಹುಕಾರರ ಹತ್ತಿರ ಹೋದರೆ ಅವರ ಹತ್ತಿರ 15-20 ಪರ್‌ಸೆಂಟ್ ಬಡ್ಡಿ ಇಲ್ಲದೆಯೇ ಸಾಲ ಸಿಕ್ಕುವುದಿಲ್ಲ. ಈ ಸಂದರ್ಭದಲ್ಲಿ ಸರ್ಕಾರದವರೂ ಈ ಸಹಕಾರ ಸಂಘಗಳೂ, ರೈತರಿಗೆ ಬೇಕಾದಷ್ಟು ಸಹಾಯವನ್ನು ಏಕೆ ಕೊಡಬಾರದು?

(ಡಾ|| ಆರ್. ನಾಗನಗೌಡ)

ಕಳೆದ 50 ವರ್ಷಗಳ ವಿಚಾರ ಮಾಡಿದರೆ, ಸಹಕಾರ ಸಂಘಗಳಿಗೆ ಆಗುವ ಮೆಂಬರುಗಳಿಗೆ ಷೇರು ಬಾಡವಾಳ ವಿಶೇಷ ಇರುವುದಿಲ್ಲ. ಷೇರುಗಳನ್ನು ತೆಗೆದುಕೊಳ್ಳುವುದಕ್ಕೆ ಯೋಗ್ಯತೆ ಇರುವುದಿಲ್ಲ. ಷೇರುಗಳನ್ನು ತೆಗೆದುಕೊಂಡರೆ, ಅದರ ಅಧಿಕ ಮಲ್ಟಿಪಲ್ (multiple) ಆಗಿ ಅವರಿಗೆ ಸೆಂಟ್ರಲ್ ಬ್ಯಾಂಕುಗಳಿಂದಲೂ ಅಪೆಕ್ಸ್ ಬ್ಯಾಂಕುಗಳಿಂದಲೂ ಸಾಲ ಸಿಕ್ಕುವುದಿಲ್ಲ. ಈ ಕೊರತೆಗಳನ್ನು ನಿವಾರಣೆ ಮಾಡುವುದಕ್ಕೆ ಸಹಕಾರ ಸಂಘಗಳಲ್ಲಿ ತಾವೇ ಷೇರುಗಳನ್ನು ತೆಗೆದುಕೊಂಡು, ಸೆಂಟ್ರಲ್ ಬ್ಯಾಂಕುಗಳಲ್ಲಿ ಮತ್ತು ಅಪೆಕ್ಸ್ ಬ್ಯಾಂಕ್ ಗಳಲ್ಲಿ ಬೇಕಾದಷ್ಟು ಹಣವನ್ನು ತಾವೇ ಒದಗಿಸಿ ಕೊಡಬೇಕೆಂದು ಹೇಳಿ ಏರ್ಪಾಡು ಮಾಡಿದ್ದೀರಿ. ಅದರ ಸಲುವಾಗಿ ಕೆಲವು ಮಾಡಲ್ ಬೈಲಾಗಳನ್ನು ಮಾಡಿದ್ದೀರಿ. ಒಂದನೆಯ ನವಂಬರ್ 1956 ರಿಂದ ಐದು ಸಂಸ್ಥಾನಗಳು ಇಲ್ಲಿ ಸೇರಿವೆ; ಆ ಐದು ಪ್ರದೇಶಗಳ ಕೋ-ಆಪರೇಟೀವ್ ಆಕ್ಟುಗಳನ್ನು ಮುಂದಿಟ್ಟುಕೊಂಡು, ಈಗ ಒಂದು ಬಿಲ್ಲನ್ನು ನಮ್ಮ ಮುಂದೆ ತಂದಿದ್ದಾರೆಂದು ನನಗೆ ತಿಳಿಯುತ್ತದೆ. ಈ ಬಿಲ್ಲಿನಲ್ಲಿ ಅನೇಕ ಉತ್ತಮವಾದಂಥ ಅಂಶಗಳಿವೆ. ಸೊಸೈಟಿಗಳಿಗೆ ಹೆಚ್ಚಿನ ದುಡ್ಡು ಒದಗಿಸಿ ಕೊಡುವುದಕ್ಕ ಅನುಕೂಲತೆಗಳಿವೆ; ಮತ್ತು ಸೊಸೈಟಿಗಳನ್ನು ಚಂದಾಗಿ ನಡೆಸಿಕೊಂಡು ಹೋಗುವುದಕ್ಕೆ ಸರ್ಕಾರದ ಕಡೆಯಿಂತ ಎಲ್ಲೆಲ್ಲ ಸಹಾಯ ಬೇಕಾಗುತ್ತದೋ ಅಲ್ಲಲ್ಲಿ ಸಹಾಯವನ್ನು ಒದಗಿಸಿಕೊಡುವುದಕ್ಕೆ ಅನುಕೂಲತೆಗಳಿವೆ. ನಮ್ಮೆಲ್ಲರಿಗೂ ಅನುಭವ ಉಂಟು. ಆಚೆಕಡೆ ಮಾದನಾಡಿದ ನಮ್ಮ ಮಿತ್ರರು—ಮುಖ್ಯವಾಗಿ ಶ್ರೀ ಮಲ್ಲಾರಾಧ್ಯರು ಮತ್ತು ಇನ್ನಿತರರು—ಈ ಸಹಕಾರ ಸಂಘಗಳಲ್ಲಿ ಏನೋ ಕೆಡಕು ಇದೆ, ಏನೋ ದುಷ್ಪರಿಣಾಮಗಳಿವೆ, ಶ್ರೀ ಪಾಟೀಲರು ಹೇಳಿದಹಾಗೆ ಏನೋ irregularities ಗಳಿವೆ; ಇವುಗಳನ್ನೆಲ್ಲಾ ಸರಿಪಡಿಸುವುದಕ್ಕೆ ಈ ಬಿಲ್ಲಿನಲ್ಲಿ ರಿಜಿಸ್ಟ್ರಾರರಿಗೆ ಅಧಿಕಾರ ಕೊಟ್ಟಿದ್ದಾರೆ; ರಿಜಿಸ್ಟ್ರಾರರು ಯಾರು ಎಂದರೆ, ಒಬ್ಬ ಮಿತ್ರರು ಹೇಳಿದರು "He is a guide, friend and philosopher" ಎಂದು. ಈವಾಗಲಾದರೂ, ರಿಜಿಸ್ಟ್ರಾರ್ ಅವರನ್ನು ಹಾಗೆಯೇ ಭಾವಿಸತಕ್ಕದ್ದು.

12-30 P.M.

ಎರಡು ಕೋಟಿ ಜನಾಂಗವಿರುವಂಥ ಸಂಸ್ಥಾನಕ್ಕೆ ಒಬ್ಬರೇ ರಿಜಿಸ್ಟ್ರಾರ್ ಇದ್ದಾರೆ. ಅವರೇನಾದರೂ ಪರುಪಾಟು ಮಾಡಿದರೆ ಅದನ್ನು ನೋಡುವುದಕ್ಕೆ ಲಕ್ಷಗಟ್ಟಲೆ ಜನರು ಇದ್ದೀವೆ. ಅದೂ ಅಲ್ಲದೆ ಪ್ರಜಾಪ್ರಭುತ್ವದಲ್ಲಿ ಅವರೇನಾದರೂ ಒಂದು ಪರುಪಾಟು ಮಾಡಿದ್ದೇ ಆದರೆ ಅದನ್ನು ತೀಕ್ಷ್ಣವಾಗಿ, ಬಹಳ ಶೀಘ್ರದಲ್ಲಿಯೇ ಸರ್ಕಾರದ ಗಮನಕ್ಕೆ ತರುತ್ತಾರೆನ್ನುವುದನ್ನು ನಾನು ನಿಮಗೆ ಹೇಳುವ ಅವಶ್ಯಕತೆಯೇ ಇಲ್ಲ.

ಅಧ್ಯಕ್ಷರು.—ಈಗ ವೇಳೆಯಾವುದರಿಂದ ಈ ಹೊತ್ತು ಸಭೆ ಮುಕ್ತಾಯವಾಗಿ ಸೋಮವಾರದ ದಿವಸ ಒಂದು ಗಂಟೆಗೆ ಪ್ರಾರಂಭವಾಗುತ್ತದೆ. ಡಾಕ್ಟರ್ ನಾಗನಗೌಡರು ಸೋಮವಾರದ ದಿವಸ ಮಾತನಾಡಬಹುದು. ಈ ಬಿಲ್ಲು ಸೋಮವಾರದ ದಿವಸ ಚರ್ಚೆಯಾಗಿ ಆ ದಿವಸವೇ ಸೆಲೆಕ್ಟ್ ಕಮಿಟಿಗೆ ಹೋಗಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯವರು ತೀರ್ಮಾನ ಮಾಡಿದ್ದಾರೆ. ಆದುದರಿಂದ ಆ ದಿನ ಮಾತನಾಡುವವರು ಸ್ವಲ್ಪ ಸ್ವಲ್ಪ ಮಾತನಾಡಿದರೆ ಹೆಚ್ಚು ಜನರಿಗೆ ಮಾತನಾಡಲಿಕ್ಕೆ ಅವಕಾಶ ಸಿಕ್ಕುತ್ತದೆ. ಒಬ್ಬರೇ ಬಹಳ ವೇಳೆ ಮಾತನಾಡಿದರೆ ಜಾಸ್ತಿ ಜನರಿಗೆ ಮಾತನಾಡಲಿಕ್ಕೆ ಅವಕಾಶ ಸಿಕ್ಕುವುದಿಲ್ಲ.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಸೋಮವಾರದ ದಿವಸ ಯಾರು ಯಾರು ಮಾತನಾಡಬೇಕೆಂಬುದನ್ನು ಇವೊತ್ತೇ ಪಟ್ಟಿಮಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ನಾನು ಪಟ್ಟಿಮಾಡುವುದಿಲ್ಲ. ಅದನ್ನು ಮಾಡುವವರು ಬೇರೆ ಇದ್ದಾರೆ. ಅವರು ಮಾಡುತ್ತಾರೆ.

The House adjourned at Thirty-two Minutes past Twelve of the Clock to meet again at One of the Clock on Monday, the 3rd November 1958.

WD 1729—GPB—900—5-12-58.